
# ಕ್ರಿಸ್ತವಿರೋಧಿಯ

## ಕುರಿತು ಅಧ್ಯಯನ

ಭಾಗ - 2

## ಅಧ್ಯಯನ # 36




# ಸತ್ಯವೇದದಲ್ಲಿರುವ
# ಮಹಾ ಸತ್ಯೋಪದೇಶಗಳು

"ನಿನ್ನ ವಾಕ್ಯವೇ ಸತ್ಯವು" - ಯೋಹಾನನು 17:17

ಸತ್ಯವೇದದಲ್ಲಿರುವ ಮಹಾ ಸತ್ಯೋಪದೇಶಗಳು

# ಅಧ್ಯಯನ # 36

## ಕ್ರಿಸ್ತವಿರೋಧಿಯ ಕುರಿತು ಅಭ್ಯಾಸ ಭಾಗ–2

<u>ದಯವಿಟ್ಟು ಗಮನಿಸಿ:</u> ಈ ತರಗತಿಯಲ್ಲಿ ತಿಳಿಸಲಾಗಿರುವ ಎಲ್ಲಾ ವಾಕ್ಯಗಳನ್ನು ಸತ್ಯವೇದದಲ್ಲಿ ಓದುವ ಮೂಲಕ ನಿಮ್ಮ ಅಭ್ಯಾಸವನ್ನು ಮುಂದುವರಿಸಿರಿ.

ಇಲ್ಲಿ ಉಪಯೋಗಿಸಿರುವ ಅತ್ಯಧಿಕವಾದ ವಾಕ್ಯಭಾಗಗಳು(ಕೆ.ಜೆ.ವಿ) ಭಾಷಾಂತರದಿಂದ ತೆಗೆದುಕೊಳ್ಳಲಾಗಿದೆ.

ಇಂದು ನಮ್ಮ ಅಭ್ಯಾಸದ ಎರಡನೆಯ ಭಾಗದಲ್ಲಿ "ಕ್ರಿಸ್ತವಿರೋಧಿಯ" ಕುರಿತು ಆಳವಾಗಿ ಅಭ್ಯಾಸ ಮಾಡೋಣ!

**ಕಳೆದ ತರಗತಿಯಲ್ಲಿ ಎಲ್ಲಾ ಜನರೂ ಹಾಗೂ ಅನೇಕ ಕ್ರೈಸ್ತರೂ ತಿಳಿದುಕೊಂಡಿರುವ ಹಾಗೆ ಕ್ರಿಸ್ತ ವಿರೋಧಿಯು ಒಬ್ಬ ಪ್ರತ್ಯೇಕವಾದ ವ್ಯಕ್ತಿಯಲ್ಲವೆಂದು ನೋಡಿದೆವು!**
**ಆತನು ಭವಿಷ್ಯದಲ್ಲಿ ಬಂದು ಇಡೀ ಜಗತ್ತನ್ನು ಆಳ್ವಿಕೆಮಾಡುವದು ಮತ್ತು ಹತ್ತೋಟಿಯಲ್ಲಿಡುವ "ರಾಜನೂ" ಅಲ್ಲ!!**

## ಏಕೆ?

ಏಕೆಂದರೆ ಸತ್ಯವೇದದಿಂದ ನಮಗೆ ಮನವರಿಕೆಯಾದದ್ದೇನೆಂದರೆ –

### 2 ಥೆಸಲೋನಿಕದವರಿಗೆ 2:7,8

"ಅಧರ್ಮವು ಈಗಲೂ ಗುಪ್ತವಾಗಿ ತನ್ನ ಕಾರ್ಯವನ್ನು ಸಾಧಿಸುತ್ತದೆ. ಆದರೆ ಇದುವರೆಗೆ ಅಡ್ಡಿಮಾಡುವವನು ತೆಗೆದುಬಿಡಲ್ಪಡುವ ತನಕ ಅದು ಗುಪ್ತವಾಗಿಯೇ ಇರುವದು. ಅವನು ತೆಗೆದುಬಿಡಲ್ಪಟ್ಟ ಕೂಡಲೆ ಆ ಅಧರ್ಮ ಸ್ವರೂಪನು ಕಾಣಬರುವನು; ಅವನನ್ನು ಯೇಸು ಕರ್ತನ ತನ್ನ ಬಾಯ ಉಸಿರಿನಿಂದ ಕೊಲ್ಲುವನು, ತನ್ನ ಪ್ರತ್ಯಕ್ಷತೆಯ ಪ್ರಕಾಶದಿಂದ ಸಂಹರಿಸುವನು."

ಹೌದು! "ಗುಪ್ತವಾಗಿರುವ ಅಧರ್ಮ ಸ್ವರೂಪನು" ಎಂದು ಕರೆಯಲ್ಪಡುವ ಈ ಕ್ರಿಸ್ತವಿರೋಧಿಯು ಮೊದಲ ಶತಮಾನ ಅಥವಾ ಅಪೋಸ್ತಲನಾದ ಪೌಲನ ದಿನಗಳಲ್ಲಿಯೇ ತನ್ನನ್ನು ತಾನೇ ವ್ಯಕ್ತಪಡಿಸಿತು ಮತ್ತು ಕರ್ತನಾದ ಯೇಸುವಿನ ಎರಡನೆಯ ಬರುವಿಕೆಯಲ್ಲಿ ನಾಶವಾಗುವದು.

ಇದರಿಂದ ಈ ಕ್ರಿಸ್ತವಿರೋಧಿಯ ಕಾಲಾವಧಿಯು ಸುಮಾರು 2000 ವರ್ಷಗಲಾಗುತ್ತದೆ!

ನಿಶ್ಚಯವಾಗಿಯೂ ಯಾವ ಮನುಷ್ಯನು ಅಷ್ಟು ಕಾಲ ಬದುಕಲಾರನು!

ಇದು ಸಾಧ್ಯವೇ ಇಲ್ಲ!!

ಆದ್ದರಿಂದ ಕ್ರಿಸ್ತವಿರೋಧಿಯು ಒಬ್ಬ ಪ್ರತ್ಯೇಕ ವ್ಯಕ್ತಿಯಲ್ಲವೆಂದು ನಾವು ನೋಡುತ್ತೇವೆ!



ನಿಜವಾಗಿ ಹೇಳುವದಾದರೆ "ಆತನು" ಅಥವಾ "ಅದು" ಒಂದು ಸೈತಾನನ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆಯು ಮಹಾ ಅದ್ಭುತಗಳು ಮತ್ತು ಅತಿಶಯಗಳ ಮೂಲಕ ಸಭೆಯಾಗಿರುವ "ದೇವರ ಆಲಯ"ದೊಳಗೆ ಇದ್ದುಕೊಂಡು ತಪ್ಪಾದ ಮತ್ತು ನಿಜವಲ್ಲದ ಉಪದೇಶಗಳನ್ನು ಸ್ಥಾಪಿಸುವದರ ಮೂಲಕ ಸತ್ಯವನ್ನು ನಾಶಮಾಡುತ್ತದೆ!

**ಹೌದು! ಈ ಕ್ರಿಸ್ತವಿರೋಧಿಯ ವ್ಯವಸ್ಥೆಯು ಸಭೆಯೊಳಗೆ ಇದ್ದುಕೊಂಡು ತನ್ನ ಕೆಲಸ ಮಾಡುತ್ತದೆ!**

ನಾವು ಮತ್ತೂ ಏನನ್ನು ನೋಡಿದೆವೆಂದರೆ, ಈ ಕ್ರಿಸ್ತವಿರೋಧಿಯ ವ್ಯವಸ್ಥೆಯನ್ನು "ದೇವರ ಸಂತರ" ಮೇಲೆ ಮೊದಲೇ ನಿರ್ಣಯಿಸಿದ 1260 ವರ್ಷಗಳ ಕಾಲ ಅಧಿಕಾರವನ್ನು ಅನುಮತಿಸಲಾಗಿತ್ತು.



**ಈ ಕ್ರಿಸ್ತವಿರೋಧಿ ಎಂದರೆ ಯಾರು ಅಥವಾ ಏನು?**

**ಸತ್ಯವೇದವು ನಮಗೆ ಈ ಕ್ರಿಸ್ತವಿರೋಧಿಯ ವ್ಯವಸ್ಥೆಯು ಸುಮಾರು 2000 ವರ್ಷಗಳಿಂದ ಇನ್ನೂ 'ಬದುಕುತ್ತಾ'ಇದೆಯೆಂದು ಬೋಧಿಸುತ್ತದೆ. ಇದು ಹೇಗೆ ಸಾಧ್ಯ?**

**....ಯಾರೂ ಸಹ ಈ ವ್ಯವಸ್ಥೆಯನ್ನು ಗುರುತು (ಕಂಡು) ಹಿಡಿಯಲು ಸಾಧ್ಯವಾಗುತ್ತಿಲ್ಲ??**

ಯಾಕೆಂದರೆ ಅದು.... "ಗುಪ್ತವಾಗಿರುವ ಅಧರ್ಮಸ್ವರೂಪನು."

ಈ ದಿನ ನಾವು ಈ ವ್ಯವಸ್ಥೆ ಮತ್ತು ಅದೆಲ್ಲದರ ವಿವರಗಳನ್ನು ಗುರುತು ಹಿಡಿಯಲು ಪ್ರಯತ್ನಿಸೋಣ –

ದಾನಿಯೇಲ್ ಪುಸ್ತಕವನ್ನು ಓದುವದರ ಮೂಲಕ ಆರಂಭಿಸೋಣ –

**ದಾನಿಯೇಲನು 7:20-21**

**"ಅತಿ ಭಯಂಕರವಾದ ನಾಲ್ಕನೆಯ ಮೃಗದ ವಿಷಯವಾಗಿಯೂ ಅದರ ತಲೆಯ ಮೇಲಣ ಹತ್ತು ಕೊಂಬುಗಳ ವಿಷಯವಾಗಿಯೂ ನಾನು ನೋಡುತ್ತಿದ್ದ ಹಾಗೆ ಯಾವ ಕೊಂಬು ಮೊಳೆತು ಮೂರು ಕೊಂಬುಗಳನ್ನು ಬೀಳಿಸಿ ದೇವಭಕ್ತರೊಂದಿಗೆ ಯುದ್ಧಮಾಡಿ........"**

ಈಗ "ದೇವಭಕ್ತರು" ಎಂದು ಸೂಚಿಸಿರುವ ವಾಕ್ಯವು ನಿಬಂಧನೆಯ "ಒಡಂಬಡಿಕೆ" ಮಾಡಿಕೊಂಡಿರುವ ಕ್ರಿಸ್ತನ ಹಿಂಬಾಲಕರನ್ನು ಸೂಚಿಸುತ್ತದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಕೀರ್ತನೆ 50:5 "ನನ್ನೊಡನೆ ಯಜ್ಞದ ಮೂಲಕ ಒಡಂಬಡಿಕೆಯನ್ನು ಮಾಡಿಕೊಂಡ ನನ್ನ ಭಕ್ತರನ್ನು ನನ್ನ ಬಳಿಗೆ ಕರಕೊಂಡು ಬನ್ನಿರಿ ಎಂದು ಆಜ್ಞಾಪಿಸುತ್ತಾನೆ."**

ಹೌದು! ಆರಂಭದ ಎಲ್ಲಾ ಅಪೋಸ್ತಲರ ಪತ್ರಿಕೆಗಳಲ್ಲಿ ಇದು ವಿಶ್ವಾಸಿಗಳನ್ನು ಸೂಚಿಸುತ್ತದೆ.

**ಇವರೆಲ್ಲರೂ ಯೇಸುವಿನ ನಿಜವಾದ "ಹಿಂಬಾಲಕರು" ಮತ್ತು ಶಿಷ್ಯರಾಗಿದ್ದರು.**


ಹಾಗಾದರೆ ಈ "ಕೊಂಬು" ಎಂದರೆ ಯಾರು ಅಥವಾ ಏನು?

## ದಾನಿಯೇಲನು 7:7,8

**"ನಾನು ರಾತ್ರಿ ಕಂಡ ಕನಸಿನಲ್ಲಿ ಸ್ವಲ್ಪ ಹೊತ್ತಿನ ಮೇಲೆ ಆಹಾ, ನಾಲ್ಕನೆಯ ಮೃಗವು ಕಾಣಿಸಿತು; ಅದು ಭಯಂಕರ, ಹೆದರಿಸುವಂಥದು, ಅಧಿಕಬಲವುಳ್ಳದ್ದು; ಅದಕ್ಕೆ ಕಬ್ಬಿಣದ ದೊಡ್ಡ ಹಲ್ಲುಗಳಿದ್ದವು; ಅದು ನುಂಗುತ್ತಾ ಚೂರುಚೂರು ಮಾಡುತ್ತಾ ಮಿಕ್ಕದ್ದನ್ನು ಕಾಲುಗಳಿಂದ ತುಳಿಯುತ್ತಾ ಇತ್ತು; ಅದು ಮುಂಚಿನ ಎಲ್ಲಾ ಮೃಗಗಳಿಗಿಂತ ವಿಲಕ್ಷಣವಾಗಿತ್ತು; ಅದಕ್ಕೆ ಹತ್ತು ಕೊಂಬುಗಳಿದ್ದವು. ನಾನು ಆ ಕೊಂಬುಗಳನ್ನು ಗಮನಿಸುತ್ತಿರುವಲ್ಲಿ ಇಗೋ, ಅವುಗಳ ನಡುವೆ ಇನ್ನೊಂದು ಚಿಕ್ಕ ಕೊಂಬು ಮೊಳೆಯಿತು; ಅದರ ದೆಸೆಯಿಂದ ಮುಂಚಿನ ಕೊಂಬುಗಳಲ್ಲಿ ಮೂರು ಬೇರು ಸಹಿತ ಕೀಳಲ್ಪಟ್ಟವು; ಆಹಾ, ಈ ಕೊಂಬಿನಲ್ಲಿ ಮನುಷ್ಯನ ಕಣ್ಣುಗಳಂತಿರುವ ಕಣ್ಣುಗಳೂ ಬಡಾಯಿ ಕೊಚ್ಚಿಕೊಳ್ಳುವ ಬಾಯೂ ಇದ್ದವು."**



ಹೌದು! ಈ ನಾಲ್ಕನೆಯ ಮೃಗಕ್ಕೆ "ಕೊಂಬು" ಮೊಳೆಯಿತು ಮತ್ತು ಅದರ ದೆಸೆಯಿಂದ ಮುಂಚಿನ ಕೊಂಬುಗಳಲ್ಲಿ ಮೂರು ಬೇರು ಸಹಿತ ಕೀಳಲ್ಪಟ್ಟವು!!

 **ಇವೆಲ್ಲದರ ಅರ್ಥವೇನು?**

ಅಭ್ಯಾಸ **#8** "ಪ್ರಪಂಚದ ಐದನೆಯ ಅರಸಾಳ್ವಿಕೆ"ಯಿಂದ ಈ "ನಾಲ್ಕನೆಯ ಮೃಗವು" ರೋಮನ್ ಸಾಮ್ರಾಜ್ಯವನ್ನು
ಸೂಚಿಸುತ್ತದೆ ಎಂದು ನಮಗೆ ತಿಳಿದಿದೆ.

ನಾಲ್ಕು ಪ್ರಪಂಚದ ಅರಸಾಳ್ವಿಕೆಯಲ್ಲಿ ನಾಲ್ಕನೆಯದಾಗಿ ಈ ಲೋಕವನ್ನು ಆಳ್ವಿಕೆ ಮಾಡಿತು.

**ಹಾಗಾದರೆ ಈ ಎಲ್ಲಾ ಕೊಂಬುಗಳು ಎಂದರೇನು?**

ಇದಕ್ಕೆ ಉತ್ತರವನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**ದಾನಿಯೇಲನು 7:24**

**"ಆ ಹತ್ತು ಕೊಂಬುಗಳ ವಿಷಯವೇನೆಂದರೆ ಆ ರಾಜ್ಯದಲ್ಲಿ ಹತ್ತುಮಂದಿ ಅರಸರು ಉಂಟಾಗುವರು; ಅವರ ತರುವಾಯ ಮತ್ತೊಬ್ಬನು ತಲೆದೋರುವನು; ಅವನು ಮುಂಚಿನ ಅರಸರಿಗಿಂತ ವಿಲಕ್ಷಣವಾಗಿ ಮೂವರು ಅರಸರನ್ನು ಅದುಮಿ ಬಿಡುವನು."**

ಹೌದು! ಅವರು ರೋಮನ್ ರಾಜ್ಯದಲ್ಲಿ
ಉಪರಾಜ್ಯಗಳು ಮತ್ತು ರಾಜರುಗಳಾಗಿರುವರು.

**ಮತ್ತು ಈ "ಚಿಕ್ಕ ಕೊಂಬು" ಎಂದರೇನು?**

ಈ "ಚಿಕ್ಕ ಕೊಂಬು" ಸಹ ಒಬ್ಬ ಅರಸನಾಗಿರುವನು ಆದರೆ ಅವನು –

**"ಇತರರಿಗಿಂತ ವಿಲಕ್ಷಣವಾಗಿರುವನು"**

**ಆ ರಾಜನು ಯಾರು?**

ಈ "ಚಿಕ್ಕ ಕೊಂಬು" ಸಹ ರೋಮನ್ ಸಾಮ್ರಾಜ್ಯದ ಒಂದು
ಉಪರಾಜ್ಯ ಅಥವಾ ರಾಜನಾಗಿದ್ದಾನೆ.

ಆದರೆ ಆತನನ್ನು "ಇತರರಿಗಿಂತ ವಿಲಕ್ಷಣವಾಗಿರುವನು" ಎಂದು ವರ್ಣಿಸಲಾಗಿದೆ.

**ನಾವು ರೋಮನ್ ಇತಿಹಾಸವನ್ನು ಓದಿದಾಗ**
**ಈ ವ್ಯತ್ಯಾಸವಾದ ರಾಜನನ್ನು ಗುರುತಿಸಬಹುದು.**

**ಹೌದು! ಆತನು ಕ್ರೈಸ್ತಸಭೆಯಿಂದ ಬಂದವನಾಗಿದ್ದಾನೆ!!**

**ಈಗ ನಾವು ಈ ವಿಷಯವನ್ನು ಕುರಿತು ಇನ್ನೂ ಸ್ಪಷ್ಟವಾಗಿ ನೋಡೋಣ!**

ಕರ್ತನು ಸಭೆಗೆ ಅಪ್ಪೋಸ್ತಲರ ಮೂಲಕ ಮಾಡಿದ ವ್ಯವಸ್ಥೆಯ ಪ್ರಕಾರ, ಸಭೆಯ ಆಡಳಿತ ವ್ಯವಸ್ಥೆಯಲ್ಲಿ ಅತ್ಯಧಿಕವಾದ ಉದ್ಯೋಗ ಸ್ಥಾನ ಯಾವುದೆಂದರೆ – ಸಭಾಧ್ಯಕ್ಷನ ಸ್ಥಾನವೆಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


**1 ತಿಮೊಥೆಯನಿಗೆ 3:1**

**"ಸಭಾಧ್ಯಕ್ಷನ ಉದ್ಯೋಗವನ್ನು ಪಡಕೊಳ್ಳಬೇಕೆಂದಿರುವವನು ಒಳ್ಳೇ ಕೆಲಸವನ್ನು ಅಪೇಕ್ಷಿಸುವವನಾಗಿದ್ದಾನೆಂಬ ಮಾತು ನಂಬತಕ್ಕದ್ದಾಗಿದೆ."**

ಈ ಸಭಾಧ್ಯಕ್ಷಕರು ಅನೇಕ ಚಿಕ್ಕ ಚಿಕ್ಕ "ಗುಂಪುಗಳು" ಅಥವಾ "ಸಭೆಗಳನ್ನು" ನೋಡಿಕೊಳ್ಳುತ್ತಿದ್ದರು ಮತ್ತು ಆ ಗುಂಪುಗಳನ್ನು ನಡೆಸುತ್ತಿದ್ದ ಮತ್ತು ಸೇವೆ ಮಾಡುತ್ತಿದ್ದ "ಹಿರಿಯ"ರನ್ನು ಮಾರ್ಗದರ್ಶನ ನೀಡಿ ಸಹಾಯ ಮಾಡುತ್ತಿದ್ದರು.

**ಎಲ್ಲಾ ಅಪ್ಪೋಸ್ತಲರು ಸಭಾಧ್ಯಕ್ಷಕರಾಗಿದ್ದರು.**

ಈ ಸಭಾಧ್ಯಕ್ಷಕರು ದೊಡ್ಡ ಪ್ರದೇಶಗಳನ್ನು ಆವರಿಸಿ ಸೇವೆ ಮಾಡುತ್ತಿದ್ದರು ಮತ್ತು ನಿರಂತರವಾಗಿ ಪ್ರಯಾಣ ಮಾಡುತ್ತಾ ಆಯಾ ಪ್ರದೇಶದ "ಸಭೆ"ಗಳನ್ನು ಭೇಟಿಮಾಡುತ್ತಿದ್ದರು.



ಆದರೆ ಈ ಸಭಾಧ್ಯಕ್ಷಕರು ಆಗಾಗ ಎಲ್ಲಾ ಸ್ಥಳಗಳಿಂದ ಒಂದುಗೂಡಿ ಸಂಪೂರ್ಣವಾಗಿ ಯೇಸು ಕ್ರಿಸ್ತನ ಸಭೆಯ ಎಲ್ಲಾ ವಿಷಯಗಳನ್ನು ಮತ್ತು ಸಭೆಯ ಹಿತವನ್ನು ಕುರಿತು ಚರ್ಚೆಮಾಡುತ್ತಿದ್ದರು.

**ಆದ್ದರಿಂದ ಇವರೇ ಬೇರೆ ಬೇರೆ ನಗರಗಳಲ್ಲಿದ್ದ ಸಭಾಧ್ಯಕ್ಷಕರಾಗಿದ್ದರು.**

ಆದರೆ ರೋಮ್ ದೇಶದ ಸಭಾಧ್ಯಕ್ಷಕನು ಸ್ವಲ್ಪ ವ್ಯತ್ಯಾಸವುಳ್ಳವನಾಗಿದ್ದನು.
ಆತನು ಇಡೀ ಲೋಕದ ರಾಜಧಾನಿಯಲ್ಲಿದ್ದನು.

ಆತನ ಕಾರಣತ್ವದಿಂದ ಚಕ್ರವರ್ತಿಯಾದ ಕಾನ್ಸ್ಟಂಟೈನ್ "ಮತಾಂತರ" ಹೊಂದಿ ಇಂದಿಗೂ ಸಹ ರೋಮನ್ ಕ್ಯಾಥೋಲಿಕ್ ಸಭೆಗಳಲ್ಲಿ ಸಂತರಾಗಿ ಎಣಿಸಲ್ಪಟ್ಟಿದ್ದಾನೆ.

ಕಾನ್ಸ್ಟಂಟೈನ್ ಕ್ರೈಸ್ತನಾಗಿ ಮತಾಂತರ ಹೊಂದಿದ ಮೇಲೆ ರೋಮ್ ದೇಶದ ಸಭಾಧ್ಯಕ್ಷಕನು ಅನೇಕ ವಿಧದಲ್ಲಿ ದಯೆಯನ್ನು ಮತ್ತು ಘನಮಾನಗಳನ್ನು ಹೊಂದಿಕೊಂಡನು ಮತ್ತು ರೋಮನ್ ಚಕ್ರವರ್ತಿಗಳಿಂದ ಗೌರವವನ್ನು ಹೊಂದಿಕೊಳ್ಳಲು ಆರಂಭಿಸಿದನು.
ಇದರ ಪರಿಣಾಮವಾಗಿ ಬೇರೆ ಸಭೆಗಳ ಸಭಾಧ್ಯಕ್ಷಕರ ಮಧ್ಯದಲ್ಲಿ ಕ್ರಮೇಣವಾಗಿ ಇನ್ನೂ ಅಧಿಕವಾದ ಗೌರವ ಮತ್ತು ಸ್ಥಾನವನ್ನು ಪಡೆದುಕೊಳ್ಳಲು ಆರಂಭಿಸಿದನು.



**ಆತನು "ತಂದೆ" [FATHER] ಎಂಬ ಪದವಿಯನ್ನು ಪಡೆದುಕೊಂಡನು.**

**ಇದಕ್ಕೆ ಲ್ಯಾಟಿನ್ ಭಾಷೆಯಲ್ಲಿ "ಪಾಪಾ" (PAPA) ಎನ್ನಲಾಗುತ್ತದೆ.**

**ಹೌದು! ಆಂಗ್ಲದಲ್ಲಿ ಹೆಸರಾಂತವಾಗಿ ಈ ಬಿರುದನ್ನು "ಪೋಪ್" (POPE) ಎಂದು ಕರೆಯಲಾಗುತ್ತದೆ!**

ಸಭೆಯಲ್ಲಿನ ಈ ಬಿರುದು ಮತ್ತು ಹಕ್ಕು ಪ್ರಾಧಾನ್ಯತೆಯು ಸಂಪೂರ್ಣವಾಗಿ ಸತ್ಯವೇದದಲ್ಲಿ ಇಲ್ಲದಿರುವ
ಮತ್ತು ಸತ್ಯವೇದಕ್ಕೆ ವಿರೋಧವಾಗಿದೆ ಎಂದು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –

**ಎಫೆಸದವರಿಗೆ 1:22**

**"ಆತನು ಸಮಸ್ತವನ್ನೂ ಕ್ರಿಸ್ತನ ಪಾದಗಳ ಕೆಳಗೆ ಹಾಕಿದನು. ಇದಲ್ಲದೆ ಆತನನ್ನು ಎಲ್ಲಾದರ ಮೇಲೆ ಇರಿಸಿ ಸಭೆಗೆ ಶಿರಸ್ಸಾಗಿ ನೇಮಿಸಿದನು."**

ಇದು ದೇವರು ಯೇಸುವನ್ನು ಸಭೆಗೆ ಒಂದೆ ಒಂದು ತಲೆಯಾಗಿ ನೇಮಿಸಿರುವದನ್ನು ಸೂಚಿಸುತ್ತದೆ. ಮತ್ತೆ ನಾವು ಹೀಗೆ ಓದುತ್ತೇವೆ –

**ಮತ್ತಾಯ 23:8,9**

**"ಆದರೆ ನೀವು ಬೋಧಕರನ್ನಿಸಿಕೊಳ್ಳಬೇಡಿರಿ; ಒಬ್ಬನೇ ನಿಮ್ಮ ಬೋಧಕನು, ನೀವೆಲ್ಲರು ಸಹೋದರರು. ಇದಲ್ಲದೆ ಭೂಲೋಕದಲ್ಲಿ ಯಾರನ್ನೂ ನಮ್ಮ ತಂದೆ ಎಂದು ಕರೆಯಬೇಡಿರಿ."**

ಮತ್ತೆ – "ತಂದೆ"ಯೆಂದು ಕರೆಯಬಾರದು ಎಂಬದಕ್ಕೆ ಇದೊಂದು ಬಲವಾದ ಸೂಚನೆಯಾಗಿದೆ.

ಆದರೆ ಕ್ರಮೇನವಾಗಿ (ನಿಧಾನವಾಗಿ) ಈ "ಪೋಪ್" ಎಂಬ ಪದವಿಯು ಮುಂದೆ ಉತ್ತರಾಧಿಕಾರಿಯಾಗುವಂತಹ ರೋಮ್ ನ ಸಭಾಧ್ಯಕ್ಷಕರಿಗೆ ವರ್ಗಾಯಿಸಲಾಯಿತು (ಸಾಗಿಸಲಾಯಿತು) ಮತ್ತು ಅವರು ಅಧಿಕಾರದಲ್ಲಿಯೂ ಮತ್ತು ಪ್ರಭಾವದಲ್ಲಿಯೂ ಬೆಳೆಯುತ್ತಾ ಹೋದರು ಮತ್ತು ಅವರು ಧಾರ್ಮಿಕ ಮಾತ್ರವಲ್ಲದೆ ರಾಜಕೀಯ ವಿಷಯದಲ್ಲಿಯೂ ಬೆಳೆಯುತ್ತಾ ಹೋದರು.

ಆದ್ದರಿಂದ ಈ "ಚಿಕ್ಕ ಕೊಂಬು" ಮೊಳೆತು ಇತರ ರೋಮನ್ ರಾಜ್ಯ ಮತ್ತು ರಾಜರುಗಿಂತ "ವಿಭಿನ್ನ"ವಾಗಿದ್ದರು ಏಕೆಂದರೆ ಅವರು ಧಾರ್ಮಿಕ – ರಾಜಕೀಯವನ್ನು ಜಂಟಿಯಾಗಿ ಆಳುವವರಾಗಿದ್ದರು.

ಈ ಪೋಪನ ಅಧಿಕಾರದ ಏಳಿಗೆಯನ್ನು ಕುರಿತು ಕೆಳಗಿನ ವಾಕ್ಯಗಳಲ್ಲಿ ಗುರುತಿಸಬಹುದು – (ದಾನಿಯೇಲನ 7:8)

**"...... ಅವುಗಳ ನಡುವೆ ಇನ್ನೊಂದು ಚಿಕ್ಕ ಕೊಂಬು ಮೊಳೆಯಿತು; ಅದರ ದೆಸೆಯಿಂದ ಮುಂಚಿನ ಕೊಂಬುಗಳಲ್ಲಿ ಮೂರು ಬೇರು ಸಹಿತ ಕೀಳಲ್ಪಟ್ಟವು.....!!**

ಇಲ್ಲಿ ಬೀಗದಕ್ಕೆಯಿರುವ ಪದಗಳೆಂದರೆ..... "ಮುಂಚಿನ (ಕೊಂಬುಗಳಲ್ಲಿ)".....

ಹೌದು! ಇದು ಕಾಲವನ್ನು ಗುರುತಿಸುವ ಬೀಗದಕ್ಕೆಯಾಗಿವೆ
ಮತ್ತು ಇದು ಪೋಪ್ ಅಧಿಕಾರವು ಮೇಲೇರುವ ಕಾಲವನ್ನು ನಮಗೆ ತೋರಿಸುತ್ತದೆ
– "ಮೂರು ಕೊಂಬುಗಳು" ಎಂದರೆ ಮೂರು

ರಾಜ್ಯಗಳ ಆಳ್ವಿಕೆಯು ಈ ಪೋಪ್ ಅಧಿಕಾರವು ಮೇಲೇರುವ ಕಾಲದ ಮುಂಚೆ ಕೊನೆಗೊಳ್ಳುವದನ್ನು ಸೂಚಿಸುತ್ತದೆ.

**ಈ ವಿಷಯವನ್ನು ಈ ಅಭ್ಯಾಸದ ನಂತರದ ಭಾಗದಲ್ಲಿ ಗುರುತು(ಕಂಡು)ಹಿಡಿಯೋಣ....**

ಆದರೆ ಇತಿಹಾಸದಲ್ಲಿ ನಾವು ನೋಡುವದೇನೆಂದರೆ ಪೋಪಗಳು – ವಿಶೇಷವಾಗಿ ಪೋಪ್ ಲಿಯೋ ಎಂಬುವವನು ಫ್ರಾನ್ಸ್ ನ ಚಕ್ರವರ್ತಿಯಾದ ಪೆಪಿನ್ ಮತ್ತು ಆತನ ಮಗ ಚಾರ್ಲ್ಮ್ಯಾಗ್ನೆ (CHARLEMAGNE) ಸೇರಿ ಒಂದು ಒಪ್ಪಂದವನ್ನು ಮಾಡಿಕೊಳ್ಳುತ್ತಾರೆ ಆ ಸ್ಥಾಪನೆಯ ಹೆಸರು ಏನೆಂದರೆ –

**ಪರಿಶುದ್ಧ ರೋಮ್ ಸಾಮ್ರಾಜ್ಯ –**

ಇಲ್ಲಿ ಸೂಚಿಸಿರುವ "ಪರಿಶುದ್ಧ" ಎಂಬ ಹಕ್ಕು ದೈವೀಕ ಅಧಿಕಾರದಿಂದ ಬಂದದ್ದು ಎನ್ನಲಾಗಿದೆ.

**ಇದು ಕ್ರಿ.ಶ. 799ರಲ್ಲಿ ನಡೆಯಿತು.**

ಇದರಿಂದ ಪೂರ್ತಿಯಾಗಿ ರೆಕ್ಕೆ ಬಂದಂತೆ ಪೋಪರು ಸಿಂಹಾಸನದ ಮೇಲೆ ರಾಜರಂತೆ ಆಳ್ವಿಕೆಮಾಡಿದರು!

**ಹೌದು! ಈಗ ನಾವು ಪೋಪನ್ನು "ಕಳ್ಳ ಕ್ರಿಸ್ತ" ವ್ಯವಸ್ಥೆ ಅಥವಾ ಸತ್ಯವೇದದ ಕ್ರಿಸ್ತವಿರೋಧಿಯೆಂದು ಗುರುತು ಹಿಡಿದಿದ್ದೇವೆ!!**

ಆದರೆ ನಾವು ಎಲ್ಲಾ ರೋಮನ್ ಕ್ಯಾತೋಲಿಕ್ಕವರು
ಕ್ರಿಸ್ತವಿರೋಧಿಗಳೆಂದು ತಪ್ಪಾಗಿ
ತಿಳಿದುಕೊಳ್ಳಬಾರದು!

**ಇಲ್ಲ!**

ಇಲ್ಲಿ ಇದೊಂದು ವ್ಯವಸ್ಥೆಯನ್ನು ಸೂಚಿಸುತ್ತದೆ ಮತ್ತು
ಅಸಹಾಯಕರಾಗಿ
ಅದರಲ್ಲಿ ಭಾಗಿಗಳಾಗಿರುವ ಪ್ರತ್ಯೇಕ ವ್ಯಕ್ತಿಗಳಲ್ಲ!



ಪೋಪನ ಅಧಿಕಾರಿಗಳು ಕ್ರಿಸ್ತವಿರೋಧಿಗಳು ಎಂದು ಗುರುತು ಹಿಡಿದ ಮೇಲೆ ಈ ವಿಷಯವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಖಚಿತಪಡಿಸಿಕೊಳ್ಳೋಣ –

**ದಾನಿಯೇಲನು 7:25**

**"ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಂಡು ಪರಾತ್ಪರನ ಭಕ್ತರನ್ನು ಸವೆಯಿಸಿ ಕಟ್ಟಳೆಯ ಕಾಲಗಳನ್ನೂ ಧರ್ಮವಿಧಿಗಳನ್ನೂ ಮಾರ್ಪಡಿಸಲು ಮನಸ್ಸುಮಾಡುವನು."**

**ಇದರ ಅರ್ಥವೇನು? ಬನ್ನಿ ನೋಡೋಣ**

**"....ಪರಾತ್ಮನಿಗೆ ವಿರುದ್ಧವಾಗಿ ಕೊಚ್ಚಿಕೊಂಡು......"**

ಇಲ್ಲಿ ಬೀಗದ ಕೈಯುಳ್ಳ ಪದಗಳೆಂದರೆ "ಪರಾತ್ಮನಿಗೆ ವಿರುದ್ಧವಾಗಿ" ಮತ್ತು "ಕೊಚ್ಚಿಕೊಂಡು".

ಬೇರೆ ರೀತಿಯಲ್ಲಿ ಹೇಳಬೇಕೆಂದರೆ, ಪೋಪನ ಅಧಿಕಾರಿಗಳು ಸ್ವತಃ ದೇವರ ವಿರುದ್ಧವಾಗಿ "ಕೊಚ್ಚಿಕೊಳ್ಳುವರು"!!

**ಇದು ಹೇಗೆ ಸಾಧ್ಯವಾಯಿತು?**

ಇದು ಹೇಗಾಯಿತೆಂದರೆ ಪೋಪನ ಅಧಿಕಾರಿಗಳು "ಮಹಾ ಪದವಿಗಳನ್ನು" ದೈವೀಕ ಅಧಿಕಾರದಿಂದ ಬಂದದ್ದು ಎಂದು ಹಕ್ಕುಸಾಧಿಸುತ್ತಾರೆ ಮತ್ತು ಈ ಪದವಿಗಳನ್ನು ತಮಗೇ ಉಂಟಾಗಿದೆ ಎಂದು ದುರುಪಯೋಗಪಡಿಸಿಕೊಂಡರು. ಆದ್ದರಿಂದ ಕ್ರಮೇಣವಾಗಿ ದೇವರನ್ನು ಮತ್ತು ಸತ್ಯವನ್ನು ತಪ್ಪಾಗಿ ಪ್ರತಿನಿಧಿಸುತ್ತಾರೆ.

**ಈ ಪದವಿಗಳು ದೇವದೂಷಣೆಯಾಗಿದೆ!**

ಅವರು ಒಟ್ಟು ಇಂತಹ 62 ದೇವದೂಷಣೆಯ ಪದವಿಗಳನ್ನು ಉಪಯೋಗಿಸಿದ್ದಾರೆ! ಇವೆಲ್ಲವನ್ನೂ ನೋಡಲು ನಮಗೆ ಸಮಯವಿಲ್ಲ ಆದರೆ ಕೆಲವನ್ನು ನೋಡುವುದರ ಮೂಲಕ ವಿಷಯದ ಬಗ್ಗೆ ನಮಗೆ ಸ್ವಲ್ಪ ತಿಳುವಳಿಕೆ ಬರುತ್ತದೆ.

**ಎಲ್ಲಾ ತಲೆಗಳ ಮೇಲೆ ಅತ್ಯಧಿಕವಾದ ದೈವೀಕತ್ವವು**

ಅವರ ಅಧಿಪತ್ಯವು ದೈವೀಕ ಅಧಿಕಾರದಿಂದ ಬಂದಿದೆಯೆಂದು ತಪ್ಪಾಗಿ ಅವರು ಈ ಪದವಿಯನ್ನು ತಮ್ಮದೆಂದು ಹಕ್ಕುಸಾಧಿಸುತ್ತಾರೆ!

## ತಂದೆಗಳ ಪರಿಶುದ್ಧ ತಂದೆ.

"ತಂದೆ"ಯೆಂದು ಕರೆಸಿಕೊಳ್ಳಲು ಇದು ದೈವೀಕ ಅಧಿಕಾರದಿಂದ ಬಂದಿತೆಂದು ತಪ್ಪಾಗಿ ಹಕ್ಕುಸಾಧಿಸಲು ಮತ್ತೊಂದು ಪದವಿಯನ್ನು ಉಪಯೋಗಿಸಲಾಗಿದೆ!



## ಕ್ರೈಸ್ತ ಧರ್ಮದ ಮೇಲ್ವಿಚಾರಕ.

ಇಡೀ ಸಭೆಗೆ ಮುಖ್ಯಸ್ಥ (headship) ನೆಂದು ಹಕ್ಕು ಸಾಧಿಸುವ ಇನ್ನೊಂದು ತಪ್ಪಾದ ಪದವಿ!

## ಕ್ರಿಸ್ತನ ತೈಲಲೇಪನ (authority)

ದೇವದೂಷಣೆಯ ಉದ್ಯೋಗಕ್ಕೆ ಅಭಿಷೇಕಿಸಲ್ಪಟ್ಟೆಯೆಂಬುದಕ್ಕೆ ಇನ್ನೊಂದು ತಪ್ಪಾದ ಹಕ್ಕುಸಾಧನೆ!

## ಅಧಿಕಾರದಲ್ಲಿ ಮೋಶೆಯಂತೆ.

ಮೋಶೆಯು ಇಡೀ ಇಸ್ರಾಯೇಲ್ ದೇಶವನ್ನು ಅಧಿಕಾರದಿಂದ ನಡೆಸಿದಂತೆ ದೇವರ ಜನರ ಮೇಲೆ
ಅಧಿಕಾರ ನಡೆಸುವ ತಪ್ಪಾದ ದೈವೀಕ ಅಧಿಕಾರದ ಹಕ್ಕು ಸಾಧನೆ.

## ಮೇಲ್ಕಿಜೆದೇಕನ ತರಹದ (ಯಾಜಕ).

ಇದು ಭಯಂಕರವಾದ ದೇವದೂಷಣೆಯ ಪದವಿಯಾಗಿದೆ.
ಆದರೆ ಈ ಮಹಾಯಾಜಕತ್ವವು ಕ್ರಿಸ್ತನೊಬ್ಬನಿಗೆ ಮಾತ್ರ ಸೇರುತ್ತದೆ!
ಆದ್ದರಿಂದ ಪೋಪರು ಯಾಜಕರಾಗಿ ಸಿಂಹಾಸನದ ಮೇಲೆ ಕೂತಿರುವದಾಗಿ ಹಕ್ಕುಸಾಧಿಸುತ್ತಾರೆ!!

## ಅಪೋಸ್ತಲರ ಸಹಭಾಧ್ಯರು – ಅಧಿಕಾರದಲ್ಲಿ ಪೇತ್ರನು.

ಇನ್ನೊಂದು ದೇವದೂಷಣೆಯ ಪದವಿಯಾಗಿದ್ದು ತಪ್ಪಾಗಿ ಹಕ್ಕುಸಾಧಿಸುವದೇನೆಂದರೆ – ಯೇಸು ಪೇತ್ರನನ್ನು ಎಲ್ಲಾ ಅಪೋಸ್ತಲರಿಗೆ ಮತ್ತು ಸಭೆಗೆ ತಲೆಯನ್ನಾಗಿ ನೇಮಿಸಿರುವದಾಗಿಯೂ ಮತ್ತು ಈ ಪೋಪರು ಸ್ವತಃ ಪೇತ್ರನಿಂದ ಈ ಉದ್ಯೊಗವನ್ನು ಪಡೆದು ಅದನ್ನು ಮುಂದುವರಿಸುತ್ತಿದ್ದಾರೆ!

## ದೇವರ ಮನೆಯ ಅಧಿಕಾರಿಗಳು.

ಇದು ಇನ್ನೊಂದು ತಪ್ಪಾದ ಮತ್ತು ದೇವದೂಷಣೆಯ ಪದವಿಯಾಗಿದ್ದು "ದೇವರ ಮನೆಯ (ನಿವಾಸ)"
ಅಧಿಕಾರವು ಯೇಸು ಕ್ರಿಸ್ತ ಒಬ್ಬನಿಗೆ ಮಾತ್ರ ಸೇರಿದ್ದಾಗಿದೆ!

## ಎಲ್ಲಾ ಪರಿಶುದ್ಧ ಸಭೆಗಳ ತಲೆ, ಸಭಾಧ್ಯಕ್ಷಕರೆಲ್ಲರಿಗೆ ಸಭಾಧ್ಯಕ್ಷಕ – ಪರಮಾಧಿಕಾರದ ಪೋಪನು (Pontiff)

ಇವು ಇನ್ನೆರಡು ತಪ್ಪಾದ ಮತ್ತು ದೇವದೂಷಣೆಯ ಪದವಿಯಾಗಿದ್ದು ಲೋಕದಲ್ಲಿರುವ ಎಲ್ಲಾ ಯೇಸುಕ್ರಿಸ್ತನ ಸಭೆಗೆ ಅಧಿಕಾರಿಯಾಗಿದ್ದಾರೆ ಎಂದು ಹಕ್ಕು ಸಾಧಿಸುತ್ತಾರೆ ಮತ್ತು ಸಭೆಗಳ ಎಲ್ಲಾ ಸಭಾಧ್ಯಕ್ಷಕರನ್ನು ಒಬ್ಬ ಸಭಾಧ್ಯಕ್ಷಕನು ಅಧಿಕಾರ ನಡೆಸುತ್ತಾನೆಂದು ಹಕ್ಕು ಸಾಧಿಸುತ್ತಾರೆ.

## ಪರಲೋಕರಾಜ್ಯದ ಬೀಗದಕ್ಕೆ ಹೊಂದಿರುವವರು.

ಇದು ಪೋಪರು ಎರಡು ಬೀಗದಕ್ಕೆಗಳನ್ನು ಹಿಡಿದುಕೊಂಡಿರುವದಾಗಿಯೂ, ಆ ಬೀಗದಕ್ಕೆಗಳು ಪರಲೋಕ ಮತ್ತು ನರಕದ ಬೀಗದಕ್ಕೆಗಳಾಗಿಯೂ ಇದೆಯೆಂದು ಹಕ್ಕುಸಾಧಿಸುತ್ತಾರೆ. ಆದ್ದರಿಂದ ತಪ್ಪಾಗಿ ಅವರು ಹಕ್ಕು ಸಾಧಿಸುವದೇನೆಂದರೆ ಆತ್ಮಗಳನ್ನು ಪರಲೋಕಕ್ಕೆ ಅಥವಾ ನರಕಕ್ಕೆ ಕಳುಹಿಸುವ ಅಧಿಕಾರ ಅವರಿಗಿದೆ!!

## ಕ್ರಿಸ್ತನ ಮತ ಭೋದಕ (VICAR OF CHRIST.)

ಇದು ಬಹಳ ನಿಯಮಿತವಾಗಿ ಉಪಯೋಗಿಸುವ ಮತ್ತು ತಪ್ಪಾಗಿ ಹಕ್ಕುಸಾಧಿಸುವದೇನೆಂದರೆ ಈ ಭೂಮಿಯಲ್ಲಿ ಕ್ರಿಸ್ತನ ಪ್ರತಿನಿಧಿಯಾಗಿದ್ದೇವೆ ಎನ್ನುತ್ತಾರೆ.

ಇದು ಇನ್ನೊಂದು ತಪ್ಪಾದ ಮತ್ತು ದೇವದೂಷಣೆಯ ಪದವಿಯಾಗಿದೆ. ದೇವರು ಭೂಮಿಯಲ್ಲಿ ಈ ರೀತಿಯಾದ ವ್ಯವಸ್ಥೆಮಾಡಿರುವದಾಗಿ ಸತ್ಯವೇದದಲ್ಲಿ ಯಾವ ಆಧಾರವೂ ಇಲ್ಲ.

ಆದ್ದರಿಂದ ಇವೆಲ್ಲಾ ಕೆಲವು ಉದಾಹರಣೆಗಳಾಗಿದ್ದು ಕೆಳಗಿನ ವಾಕ್ಯವು ಪೋಪನ ಆಡಳಿತದಲ್ಲಿ ಹೇಗೆ ನೆರೆವೇರಿದೆ ಎಂದು ತೋರಿಸುತ್ತದೆ –

**"......ಪರಾತ್ಪರನಿಗೆ ವಿರುದ್ಧವಾಗಿ ಕೊಚ್ಚಿಕೊಂಡು...."**

**"ಪರಾತ್ಪರನ ಭಕ್ತರನ್ನು ಸವೆಯಿಸಿ....."**

ಇದು ಪೋಪರು ಎಲ್ಲಾ ನಂಬಿಗಸ್ತರಾದ ಕ್ರೈಸ್ತರು ಮತ್ತು ಸತ್ಯವೇದದ ವಿಶ್ವಾಸಿಗಳ ಮೇಲೆ ಹೇಗೆ ನಡೆಸಿದರೆಂದು ಸೂಚಿಸುತ್ತದೆ.

ಈ ಉಪದ್ರವದ ವಿವರಗಳನ್ನು ಕುರಿತು ಈ ಅಭ್ಯಾಸದ ನಂತರದ ಭಾಗದಲ್ಲಿ ನೋಡಲಿದ್ದೇವೆ.

**"ಕಟ್ಟಳೆಯ ಕಾಲಗಳನ್ನು ಧರ್ಮವಿಧಿಗಳನ್ನೂ ಮಾರ್ಪಡಿಸಲು"**

ಇದು ಪೋಪರು ದೇವರ ಧರ್ಮವಿಧಿಗಳು ಮತ್ತು ಕಟ್ಟಳೆಯ ಕಾಲಗಳನ್ನೂ ಹೇಗೆ ಮಾರ್ಪಡಿಸಿದರು ಎಂದು ಸೂಚಿಸುತ್ತದೆ. ಇದು ಹೇಗೆ ಎಂದು ಕೆಳಗಿನ ವಾಕ್ಯದಲ್ಲಿ ಓದೋಣ –

**ವಿಮೋಚನಕಾಂಡ 20:4,5**

**"ಯಾವ ಮೂರ್ತಿಯನ್ನೂ ಮಾಡಿಕೊಳ್ಳಬಾರದು. ಆಕಾಶದಲ್ಲಾಗಲಿ ಭೂಮಿಯಲ್ಲಾಗಲಿ ಭೂಮಿಯ ಕೆಳಗಣ ನೀರಿನಲ್ಲಾಗಲಿ ಇರುವ ಯಾವದರ ರೂಪವನ್ನೂ ಮಾಡಿಕೊಳ್ಳದಾರದು. ಅವುಗಳಿಗೆ ಅಡ್ಡಬೀಳಲೂಬಾರದು ಪೂಜೆಮಾಡಲೂ ಬಾರದು. ನಿನ್ನ ದೇವರಾದ ಯೆಹೋವನೆಂಬ ನಾನು ನನಗೆ ಸಲ್ಲತಕ್ಕ ಗೌರವವನ್ನು ಮತ್ತೊಬ್ಬನಿಗೆ ಸಲ್ಲಗೊಡಿಸದವನಾದದರಿಂದ ನನ್ನನ್ನು ದ್ವೇಷಿಸುವವರ ವಿಷಯದಲ್ಲಿ ತಂದೆಗಳ ದೋಷಫಲವನ್ನು ಮಕ್ಕಳ ಮೇಲೆ ಮೂರು ನಾಲ್ಕು ತಲೆಗಳ ವರೆಗೆ ಬರಮಾಡುವವನಾಗಿಯೂ ನನ್ನನ್ನು ಪ್ರೀತಿಸಿ......."**



ಇದು ದೇವರ ಹತ್ತು ಆಜ್ಞೆಗಳಲ್ಲಿ ಎರಡನೆಯ ಆಜ್ಞೆಯಾಗಿದೆ.
ದೇವರು ತನ್ನ ಕಟ್ಟಳೆಯ ಒಂದು ಭಾಗವಾಗಿ ಇದನ್ನು ನೀಡಿದ್ದಾನೆ.
ಆದರೆ ಪೋಪರು ಈ ಆಜ್ಞೆಯನ್ನು ಕ್ಯಾಟೆಕಿಜಮ್ (ಪ್ರಶ್ನೋತ್ತರ ರೂಪದ ಗ್ರಂಥ)ದಲ್ಲಿ ಈ ಎರಡನೆಯ ಆಜ್ಞೆಯನ್ನು ಸಂಪೂರ್ಣವಾಗಿ ತೆಗೆದುಬಿಟ್ಟಿದ್ದಾರೆ!!
ಆದ್ದರಿಂದ ರೋಮನ್ ಕ್ಯಾಥೋಲಿಕ್ಕವರು ದೇವರ ಮುಖ್ಯವಾದ ಈ ಆಜ್ಞೆಯ ಬಗ್ಗೆ ತಿಳಿಯದವರಾಗಿದ್ದಾರೆ.

## ಅವರು ಹೀಗೆ ಏಕೆ ಮಾಡಿದರು?

ಏಕೆಂದರೆ ಅದು ವಿಗ್ರಹ ಆರಾಧನೆಯ ವಿರೋಧವಾಗಿ ದೇವರ ಬಹಳ ಕಟ್ಟುನಿಟ್ಟಾದ ಆಜ್ಞೆಯಾಗಿದೆ. ಮತ್ತು ರೋಮನ್ ಕ್ಯಾಥೋಲಿಕ್ ಸಭೆಗಳಲ್ಲಿ ಎಲ್ಲಾ ವಿಧವಾದ ವಿಗ್ರಹ ಆರಾಧನೆಯನ್ನು ಸಾಮಾನ್ಯವಾಗಿ ನೋಡಬಹುದು.



**ಆದರೆ ಈ ವಿಷಯಕ್ಕೆ ಇನ್ನೂ ಹೆಚ್ಚಾದ ಅಂಶವಿದೆ!**

ರೋಮನ್ ಕ್ಯಾಥೋಲಿಕ್ಕ ಕ್ಯಾಟೆಕಿಜಮ್ ಪುಸ್ತಕದಲ್ಲಿ ದೇವರ ಹತ್ತು ಆಜ್ಞೆಗಳ ಪಟ್ಟಿಯನ್ನು ಕೊಡಲಾಗಿದೆ!
ಹೌದು! ಅಲ್ಲಿ ಹತ್ತು ಆಜ್ಞೆಗಳಿವೆ!!

**ಇದು ಹೇಗೆ ಎಂದು ನೀವು ಆಶ್ಚರ್ಯಪಡಬಹುದು? .......**
**ಹತ್ತರಿಂದ ಒಂದನ್ನು ತೆಗೆದುಬಿಟ್ಟರೆ, ಉಳಿದದ್ದು ಒಂಬತ್ತು ಆಗುತ್ತದೆ!**

**ಆದರೆ ಅಲ್ಲಿ ಹತ್ತು ಆಜ್ಞೆಗಳಿವೆ!**

ಹೀಗಾಗಲು ಹೇಗೆ ಸಾಧ್ಯ??

ಜಾಣತನದ ತಿದ್ದುಪಾಟಿನಿಂದ ದೇವರ ಹತ್ತನೆಯ ಆಜ್ಞೆಯನ್ನು ಎರಡಾಗಿ ವಿಭಾಗಿಸಲಾಗಿದೆ.

ಆದ್ದರಿಂದ ಒಂಬತ್ತು ಆಜ್ಞೆಗಳು ಹತ್ತಾಗಿ ಮಾರ್ಪಾಟಾಗಿದೆ!!

ದೇವರ ಹತ್ತನೆಯ ಅಜ್ಞೆ ಹೀಗಿದೆ –

**ವಿಮೋಚನಕಾಂಡ 20:17**

**"ಮತ್ತೊಬ್ಬನ ಮನೆಯನ್ನು ಆಶಿಸಬಾರದು; ಮತ್ತೊಬ್ಬನ ಹೆಂಡತಿ ಗಂಡಾಳು ಹೆಣ್ಣಾಳು, ಎತ್ತು ಕತ್ತೆ ಮುಂತಾದ ಯಾವದನ್ನೂ ಆಶಿಸಬಾರದು."**

ಹೌದು! ಹತ್ತನೆಯ ಆಜ್ಞೆಯ ಒಂದು ಭಾಗವಾದ – **"ಮತ್ತೊಬ್ಬನ ಹೆಂಡತಿಯನ್ನು ಆಶಿಸಬಾರದು"** ಎಂಬುದನ್ನು ಒಂಬತ್ತನೆಯ ಆಜ್ಞೆಯಾಗಿ ಮಾಡಿ ಉಳಿದದ್ದನ್ನು – ಹತ್ತನೆಯ ಆಜ್ಞೆಯನನ್ನಾಗಿ ಮಾಡಲಾಗಿದೆ!

ನಿಜವಾಗಿಯೂ, ಪೋಪರು **"ಕಟ್ಟಳೆಯ ಕಾಲಗಳನ್ನೂ ಧರ್ಮ ವಿಧಿಗಳನ್ನೂ ಮಾರ್ಪಡಿಸಲು ಮನಸ್ಸುಮಾಡುವನು."**

ಈಗ ನಾವು **"ಕಾಲಗಳನ್ನೂ...... ಮಾರ್ಪಡಿಸುವ"** ವಿಷಯವನ್ನು ಕುರಿತು ನೋಡೋಣ –

**ಪ್ರಕಟನೆ 20:5**

**"ಮಿಕ್ಕ ಸತ್ತವರು ಆ ಸಾವಿರ ವರುಷ ತೀರುವ ತನಕ ಜೀವಿತರಾಗಿ ಏಳಲಿಲ್ಲ. ಇದೇ ಪ್ರಾಥಮ ಪುನರುತ್ಥಾನವು."**


ಇದು ಮನುಷ್ಯರಿಗಾಗಿರುವ ದೇವರ ದೈವೀಕ ಯೋಜನೆಯ ಮಹಾ (ಅತಿದೊಡ್ಡ) "ಸಮಯ"ವನ್ನು ಸೂಚಿಸುತ್ತದೆ.

ಇದನ್ನು ಎಲ್ಲಾ ಮನುಷ್ಯಜಾತಿಗೆ ಇರುವ "ಬಂಗಾರದ (ಸುವರ್ಣದ) ಯುಗ"ವೆಂದು ಕರೆಯಲಾಗುತ್ತದೆ!

ಇದು ಕ್ರಿಸ್ತನು ಈ ಭೂಮಿಯಲ್ಲಿ ಒಂದು ಸಾವಿರ ವರ್ಷಗಳು ಆಳುವ ಆಳ್ವಿಕೆಯನ್ನು ಸೂಚಿಸುತ್ತದೆ!

**ಆಗ ರಾಜ್ಯಕ್ಕಾಗಿಯೇ ಎಲ್ಲಾ ಕ್ರೈಸ್ತರು ಹೀಗೆ ಪ್ರಾರ್ಥಿಸುತ್ತಾರೆ -**

**“ ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತವು ಪರಲೋಕ ದಲ್ಲಿ ನೆರವೇರುವ ಪ್ರಕಾರ ಭೂಲೋಕದಲ್ಲಿ ಯೂ ನೆರವೇರಲಿ.”**



ಹೌದು! ಈ "ಕಾಲದ" ಬಗ್ಗೆ ಸ್ವಲ್ಪ ಜನರಿಗೆ ಮಾತ್ರ ಗೊತ್ತಿದೆ.

ಸತ್ಯವೇದದಲ್ಲಿ "ಸಾವಿರ ವರ್ಷ"ಗಳನ್ನು ಕುರಿತು ಎರಡು ವಾಕ್ಯಗಳಲ್ಲಿ ಮಾತ್ರ ಹೇಳುತ್ತದೆ –

ಮತ್ತು ಅವೆರಡೂ ಸತ್ಯವೇದದ ಕೊನೆಯ ಪುಸ್ತಕದಲ್ಲಿದೆ –

**ಪ್ರಕಟನೆ 20:4 ಮತ್ತು 20:6!!**

ಆದರೆ ಪೋಪರು ತಮ್ಮ ಪರಿಶುದ್ಧ ರೋಮ್ ಸಾಮ್ರಾಜ್ಯವನ್ನು ಸ್ಥಾಪಿಸಿದಾಗ ಅವರು ಹಕ್ಕುಸಾಧಿಸಿದ್ದೇನೆಂದರೆ –

ಆ ಸಾಮ್ರಾಜ್ಯವೇ ಕ್ರಿಸ್ತನ "ಒಂದು ಸಾವಿರ ವರ್ಷ"ಗಳ ಆಳ್ವಿಕೆ

ಮತ್ತು ಕ್ರಿಸ್ತನ ಪರವಾಗಿ ಅವರು ಆಳ್ವಿಕೆ ಮಾಡುವರು!

**ಆದ್ದರಿಂದ ಈ ಪರಿಶುದ್ಧ ರೋಮ್ ರಾಜ್ಯವು ಕ್ರಿ.ಶ799 ರಿಂದ ಕ್ರಿ.ಶ.1799 ವರೆಗೆ ಸಾಮಾನ್ಯವಾಗಿ ಪೋಪರ ಮೂಲಕ ಆ "ಕ್ರಿಸ್ತನ ಸಾವಿರ ವರ್ಷಗಳ ಆಳ್ವಿಕೆ" ಸ್ಥಾಪಿತವಾಯಿತು ಎಂದು ಹೇಳಲಾಯಿತು.**

ಹೌದು! ಕರ್ತನು ನೇಮಕ ಮಾಡಿದ ಸಮಯಕ್ಕೆ ಮೊದಲೇ ಸಭೆಯ ಬಲದೊಂದಿಗೆ ಸ್ಥಾಪಿತವಾಯಿತು.

ಹೌದು!...ನಿಜವಾಗಿಯು ದೇವರ ರಾಜ್ಯವನ್ನು ಭೂಮಿಯಲ್ಲಿ ಸ್ಥಾಪಿಸುವದಕ್ಕೆ ಯೇಸು ಕ್ರಿಸ್ತನ ಎರಡನೆಯ ಬರುವಿಕೆಗೆ ಮೊದಲೇ ಮತ್ತು ಕೆಳಗಿನ ವಾಕ್ಯವು

ನೆರವೇರುವದಕ್ಕೆ ಮೊದಲೇ ಸ್ಥಾಪಿತವಾಯಿತು.

**ಮತ್ತಾಯ 6:10**

"ನಿನ್ನ ರಾಜ್ಯವು ಬರಲಿ, ನಿನ್ನ ಚಿತ್ತ ಪರಲೋಕದಲ್ಲಿನೆರವೇರುವ ಪ್ರಕಾರ ಭೂಲೋಕದಲ್ಲಿಯು ನೆರವೇರಲಿ".

**ಹೌದು ಈ ರಾಜ್ಯದ "ನಿರೀಕ್ಷೆ"ಯು ಪೋಪ್ ವ್ಯವಸ್ಥೆಯು ಆಳ್ವಿಕೆಯು ಕಾಲವಾದ**

**ಕಿ.ಶ.799 ರಿಂದ 1799 ರವರೆಗೆ......**

**ಒಂದು ಸಾವಿರ ವರ್ಷಗಳ ಕಾಲಾವಧಿಯಲ್ಲಿ ನೆರವೇರಿತೆಂದು ಹೇಳಲಾಗುತ್ತದೆ !**

**ಇದು ನಕಲಿ (ಸುಳ್ಳಾದ) ಪೋಪ್ ವ್ಯವಸ್ಥೆಯ ಸಹಸ್ರವರ್ಷಗಳಾಗಿದ್ದು (COUNTERFEIT MILLENNIUM) ಕ್ರಿಸ್ತನ ಬಲ ಮತ್ತು ಅಧಿಕಾರದೊಂದಿಗೆ ಭೂಮಿಯನ್ನು ಆಳುವುದಾಗಿ ....ಮತ್ತು ಇಡೀ ಲೋಕದಲ್ಲ ದೇವರ ರಾಜ್ಯವನ್ನು ಸ್ಥಾಪಿಸಿರುವದಾಗಿ ಹೇಳಲಾಯಿತು.**

**ಇದು ಕ್ರಿ.ಶ. 799 ರಿಂದ ಕಿ.ಶ. 1799ವರೆಗೆ ನಡೆಯಿತು.**

ಆದರೆ ನಿಜವಾದ ಕ್ರಿಸ್ತನ ಆಳ್ವಿಕೆಯ ಕಾಲವಾದ ಒಂದು ಸಾವಿರ ವರ್ಷಗಳು ಯವಾಗೆಂದರೆ –

....ಯೇಸುವು ಮಹಾ ಮಹಿಮೆಯೊಂದಿಗೆ ಆತನ ಎರಡನೆಯ ಬರುವಿಕೆಯ ನಂತರ ನಡೆಯುತ್ತದೆ !

ಆದ್ದರಿಂದ, ಪೋಪರು ಈ ರೀತಿಯಾಗಿ ಯೋಚಿಸಿದರು

"......ಕಾಲಗಳನ್ನು ಮಾರ್ಪಡಿಸುವ"

**ಆದ್ದರಿಂದ ಪೋಪರನ್ನು ಒಂದು ಕ್ರಿಸ್ತವಿರೋಧಿಯ ವ್ಯವಸ್ಥೆ ಎಂದು ನಾವು ಗುರುತುಹಿಡಿದ್ದೇವೆ.**

**ಈ ವ್ಯವಸ್ಥೆಯು "1260 ದಿನಗಳು" ಅಥವಾ 1260 ನೇರವಾದ ವರ್ಷಗಳು ಅಧಿಕಾರ ಮಾಡುವುದಕ್ಕೆ ಅನುಮತಿಸಲಾಗಿದೆ.**



ಈ ಕಾಲವು ಫ್ರಾನ್ಸಿನ **ನೆಪೋಲಿಯನ್ ಬೋನಪಾರ್ಟೆ** ಬಂಧನಕ್ಕೊಳಗಾದ ಕ್ರಿ.ಶ.1799ರಲ್ಲಿ ಅಂತ್ಯಗೊಂಡಿತು, ಇದಾದ ನಂತರ **ಪೋಪ್ ಪಿಯೂಸ್** ನನ್ನು ಒಂದು ಸೆರಮನೆಯಿಂದ ಇನ್ನೊಂದು ಸೆರೆಮನೆಗೆ ಆತನು ಸಾಯುವ ತನಕ ಬದಲಾಯಿಸುತ್ತಿದ್ದರು ಮತ್ತು **ಪೋಪರ ಅಧಿಕಾರವು** ಅಲ್ಲಿಗೆ ಅಂತ್ಯಗೊಂಡಿತು.



**ಹೌದು! ಪೋಪನ "ಆಧಿಕಾರ"ವು ಕ್ರಿ.ಶ 1799ರಲ್ಲಿ ಕೊನೆಗೊಂಡಿತು.**

ಆದ್ದರಿಂದ ಕಾಲಪ್ರವಾದನೆಯಲ್ಲಿ ನೋಡಿದಂತೆ ಈ "ಒಂದು ಸಾವಿರದ ಇನ್ನೂರ ಅರವತ್ತು ದಿನಗಳ" ಕಾಲವು ಕೊನೆಗೊಂಡಿತು.

**ಈ ಅಧಿಕಾರವು ಎಂದಿಗೆ ಆರಂಭವಾಯಿತು?**

ತುಂಬಾ ಸುಲಭ! ನಾವು 1799 ರಿಂದ 1260 ವರ್ಷಗಳ ಹಿಂದಕ್ಕೆ ಹೋಗಬೇಕು!

**1799ಕ್ಕೆ ಮುಂಚೆ ಇರುವ 1260 ವರ್ಷಗಳು!!**

**ಹೌದು ಈ ವಿಷಯವನ್ನು ಕುರಿತು ಲೆಕ್ಕಮಾಡುವ -**

**ಕ್ರಿ.ಶ. 1799 — 1260 = ಕ್ರಿ.ಶ. 539**

ಹೌದು! ಅದೇ ವರ್ಷದಲ್ಲಿ ಪೋಪರ ಅಧಿಕಾರದಲ್ಲಿ ಮೇಲೇರಿ ಪರಿಪೂರ್ಣವಾಗಿ ಹೋಲುವದನ್ನು ನೋಡುತ್ತೇವೆ!

ಏಕೆಂದರೆ ಅದೇ ಕ್ರಿ.ಶ 539ರಲ್ಲಿ ರೋಮ್ನ ಸಭಾಧ್ಯಕ್ಷಕನು ಚಕ್ರವರ್ತಿಯಾದ ಜಸ್ಟೀನಿಯನ್ನಿಂದ ಒಂದು ಪತ್ರವನ್ನು ಸ್ವೀಕರಿಸುತ್ತಾನೆ.

ಈ ಚಕ್ರವರ್ತಿಯು ತನ್ನನ್ನು

**.....ಪೋಂಟಿಫೆಕ್ಸ್ ಮ್ಯಾಕ್ಸಿಮಸ್**

– ಅಥವಾ ರೋಮನ್ ರಾಜ್ಯದ ಎಲ್ಲಾ ಧಾರ್ಮಿಕ ವಿಷಯಗಳಲ್ಲಿ ತಲೆಯಾಗಿದ್ದಾನೆ ಎಂದು ತನ್ನನ್ನೇ ಗುರುತಿಸಿಕೊಳ್ಳುತ್ತಾನೆ. ಇದಲ್ಲದೆ ಅದೇ ವರ್ಷದಲ್ಲಿ ಮೂರನೆಯ "ಕೊಂಬು"

ಅಥವಾ ಮೂರ ಕೊಂಬುಗಳ ರಾಜ್ಯವು ಬೀಳುತ್ತದೆ.

ಅದುವೇ ಓಸ್ಟ್ರೋಗೋತ್ತಿಕ್ ಸಾಮ್ರಾಜ್ಯವಾಗಿದೆ.

ಮೊದಲ "ಎರಡು ಕೊಂಬುಗಳು" ಯಾವದೆಂದರೆ – ಹೆರೂಲಿ ಮತ್ತು ಪೂರ್ವದ ಎಕ್ಸ್ಟ್ರಚಾರ್ಟೆ.

ಆದ್ದರಿಂದ ಈ ಪೋಪ್ ವ್ಯವಸ್ಥೆಯ ರಾಜರು ಮತ್ತು ಮುಖ್ಯಸ್ಥರು ತಮ್ಮನ್ನು ದೇವದೂಷನೆಯ ಬಿರುದುಗಳಿಂದ "ಕ್ರಿಸ್ತನ ವ್ಯವಸ್ಥೆಯ"

.......ವಿರೋಧಿಯಾಗಿ **ಕ್ರಿಸ್ತವಿರೋಧಿಯ** ವ್ಯವಸ್ಥೆಯಾಗಿ **ಕ್ರಿ.ಶ 539ರಿಂದ 1799**ರವರೆಗೆ ಆಳ್ವಿಕೆಮಾಡಿದರು.

## ನಾವು ಸರಿಯಾಗಿ........ ಕ್ರಿಸ್ತವಿರೋಧಿಯನ್ನು ಗುರುತುಹಿಡಿದಿದ್ದೇವಾ?

ಒಂದು ಮುಖ್ಯವಾದ ವಚನವನ್ನು ಓದಿ ನೋಡೋಣ –


**ಪ್ರಕಟನೆ 13:18**

"ಇದರಲ್ಲಿ ಜ್ಞಾನವು ಅಡಕವಾಗಿದೆ. ಬುದ್ಧಿವಂತನು ಆ ಮೃಗದ ಅಂಕೆಯನ್ನು ಎಣಿಸಲಿ;
ಅದು ಒಬ್ಬ ಮನುಷ್ಯನನ್ನು ಸೂಚಿಸುವ ಅಂಕೆಯಾಗಿದೆ;
ಅದರ ಅಂಕೆಯು ಆರುನೂರ ಅರುವತ್ತಾರು."

"ಮೃಗ" ಎಂಬ ಪದವು ದಾನಿಯೇಲನು 7ನೇ ಅಧ್ಯಾಯದಲ್ಲಿ ಬರೆದಿರುವುದನ್ನು ಕುರಿತು ನೋಡಿದ್ದೇವೆ.

ಆದ್ದರಿಂದ, ಆ ನಾಲ್ಕು "ಮೃಗಗಳು" ಅರಸಾಳ್ವಿಕೆ ಅಥವಾ ಸಾಮ್ರಾಜ್ಯವನ್ನು ಸೂಚಿಸುತ್ತದೆ ಎಂದು ನೋಡಿದ್ದೇವೆ.

ಆದ್ದರಿಂದ ಇಲ್ಲಿ ಸೂಚಿಸಿರುವ "ಮೃಗ"ವು ಎಲ್ಲಾ ಪೋಪರು ರಾಜರುಗಳಾಗಿ ನಿರಂತರವಾಗಿ
ಅರಸಾಳ್ವಿಕೆ ಅಥವಾ ರಾಜ್ಯವನ್ನಾಳಿದರು ಎಂದು ನೋಡುತ್ತೇವೆ!



# 666

**ಎಂಬ ಸಂಖ್ಯೆಯು ಏನ್ನನ್ನು ಸೂಚಿಸುತ್ತದೆ ?**

ಇಲ್ಲಿರುವ ಸಂಖ್ಯೆಯು ಈ "ಮೃಗವನ್ನು" ಅಥವಾ ಪೋಪ್ನ ರಾಜ್ಯವನ್ನು ಅಥವಾ ಅರಸಾಳ್ವಿಕೆಯನ್ನು
ಸೂಚಿಸುತ್ತದೆ ಎಂದು ನಮ್ಮ ಕರ್ತನು ಹೇಳುತ್ತಾನೆ!

**ಇದು ಹೇಗೆ ಎಂದು ನೀವು ಕೇಳಬಹುದು?**

ಇದು ಪೋಪನ ಮುಖ್ಯ ಪದವಿಯ ಸಂಖ್ಯೆಯ ಬೆಲೆಯಾಗಿದೆ.

# VICARIUS FILLI DEI

ಅಂದರೆ ಲ್ಯಾಟಿನ್ ಭಾಷೆಯಲ್ಲಿ ಬಿಷಪ್ ನ ಪ್ರತಿ ನಿಧಿಯಾದ ದೇವರ ಮಗನು(ಕ್ರಿಸ್ತ ನು) ಎಂದರ್ಥ.

ಈ ಪದವಿಯನ್ನು ಪೋಪರ "ಕಿರೀಟ"ದಲ್ಲಿ ಮತ್ತು ವಾಟಿಕನ್ ಪಟ್ಟಣದ ಮುಖ್ಯದ್ವಾರದ ಮೇಲೆ ಕಾಣಬಹುದು.

**ರೋಮನ್ ಸಂಖ್ಯೆಯ ಬೆಲೆಯು ಹೀಗಿವೆ -**

(ನಾವೆಲ್ಲರೂ ಶಾಲೆಯಲ್ಲಿ ಈ ರೋಮನ್ ಸಂಖ್ಯೆಯನ್ನು ಕಲಿತಿದ್ದೇವೆ ಎಂದು ನಾನು ನಂಬುತ್ತೇನೆ!)

V – 5
I – 1
C – 100
A – 0
R – 0
I – 1
U – 5
S – 0
112

F – 0
I – 1
L – 50
I – 1
I – 1
53

D – 500
E – 0
I – 1
501

**ಆದ್ದರಿಂದ ಇವೆಲ್ಲವನ್ನು ಕೂಡಿಸಿದರೆ**

112 + 53 + 501 = **666**

ಹೌದು! ಅದು "ಒಬ್ಬ ಮನುಷ್ಯನ" ಸಂಖ್ಯೆ ಯಾಗಿದೆ – "ಪಾಪದ ಮನುಷ್ಯ" – ಸತ್ಯವೇದದ ಕ್ರಿಸ್ತ ವಿರೋಧಿಯಾಗಿದ್ದಾನೆ!!

ಹೌದು! ವಾಟಿಕನ್ ಪಟ್ಟನ ಹಿತ್ತಾಳೆಯ ಮುಖ್ಯದ್ವಾರ ಮತ್ತು ಪೋಪನ **ಕಿರೀಟದ** ಮೇಲೆ ಇರುವ ಹೆಸರು ಕ್ರಿಸ್ತವಿರೋಧಿಯ ಸ್ಪಷ್ಟವಾದ ಗುರುತಾಗಿದೆ.

**Vicar of the Son of God,** or *Vicarius Filii Dei* in Latin, is a title mentioned in the *Donation of Constantine* as belonging to Saint Peter. It is said that this is the official title possessed by the Pope as head of the Roman Catholic Church. When numerised, the words *Vicarius Filii Dei* produces the total of 666, the number described as the number of the beast. Some claim that this is evidence that the Pope is the antichrist and that such a title is written on the Papal Tiara, the papal crown.




ಈಗ ಕೊನೆಯದಾಗಿ ಸತ್ಯವೇದದಲ್ಲಿ ಪೋಪರು ನಿಜವಾಗಿಯೂ ಒಂದು ಕ್ರಿಸ್ತವಿರೋಧಿಯ ವ್ಯವಸ್ಥೆಯೆಂದು ಗುರುತಿಸಿದ ಮೇಲೆ ಈ ಅಂಶವನ್ನು ಸತ್ಯವೇದದ ಇನ್ನೂ ಕೆಲವು ವಾಕ್ಯಗಳಲ್ಲಿ ಖಚಿತಪಡಿಸಿಕೊಳ್ಳೋಣ –

### II ಥೆಸಲೊನೀಕದವರಿಗೆ 2:3,4

“ಯಾರೂ ಯಾವ ವಿಧದಲ್ಲಿಯೂ ನಿಮ್ಮನ್ನು ಮೋಸಗೊಳಿಸದಂತೆ ನೋಡಿಕೊಳ್ಳಿರಿ; ಯಾಕೆಂದರೆ ಮೊದಲು ಮತಭ್ರಷ್ಟತೆಯು ಉಂಟಾಗಿ ಅಧರ್ಮಸ್ವರೂಪನು ಬೈಲಿಗೆ ಬಂದ ಹೊರತು ಆ ದಿನವು ಬರುವದಿಲ್ಲ. ಯಾವದು ದೇವರೆನಿಸಿಕೊಳ್ಳುತ್ತದೋ ಯಾವದು ಪೂಜೆ ಹೊಂದುತ್ತದೋ ಅದನ್ನೆಲ್ಲಾ ನಾಶನಕ್ಕೆ ಅಧೀನನಾದ ಆ ಪುರುಷನು ಎದುರಿಸಿ ಅದಕ್ಕಿಂತ ಮೇಲಾಗಿ ತನ್ನನ್ನು ತಾನೇ ಹೆಚ್ಚಿಸಿಕೊಂಡು ತಾನು ದೇವರೆಂದು ಹೇಳಿಕೊಂಡು ದೇವರ ಗರ್ಭಗುಡಿಯಲ್ಲೇ ಕೂತುಕೊಳ್ಳುತ್ತಾನೆ.”

ಇಲ್ಲಿ "ಅಧರ್ಮಸ್ವರೂಪನು" ಎಂದರೆ ಕ್ರಿಸ್ತವಿರೋಧಿ – ಪೋಪನ ಒಂದು ವ್ಯವಸ್ಥೆಯಾಗಿದ್ದು, ಅದು ಬೆಳೆದು –

**“ಮೊದಲು ಭ್ರಷ್ಟತೆಯು ಉಂಟಾಗಿ”** ನಂತರ ಅಧಿಕಾರಕ್ಕೆ ಬರುತ್ತಾರೆ.

ಇದು ಅನೇಕ ಕ್ರೈಸ್ತರು ನಿಜವಾದ ಸತ್ಯವೇದದ ಜ್ಞಾನವನ್ನು ಹೊಂದದೆ ಭ್ರಷ್ಟರಾಗುತ್ತಾರೆ.

ಏಕೆಂದರೆ ಸತ್ಯವೇದ ಅಭ್ಯಾಸವು ಕ್ರಮೇಣವಾಗಿ ನಿಲ್ಲಿಸಿಬಿಡುತ್ತಾರೆ ಮತ್ತು ನಂಬಿಕೆಯು "ಮತಾಭಿಪ್ರಾಯ" ಎಂದು ಕರೆಯಲ್ಪಡುವವದರ ಮೇಲೆ ಅವಲಂಬಿಸಿರುತ್ತದೆ!

ಸತ್ಯವೇದದ ಜ್ಞಾನ ಮತ್ತು ಸತ್ಯವು ಕಳೆದುಕೊಂಡಂತೆಯೇ ಸುಳ್ಳು (ತಪ್ಪಾದ) ಬೋಧನೆಗಳನ್ನು ಪರಿಚಯಿಸುವದು ಬಹಳ ಸುಲಭವಾಯಿತು ಮತ್ತು ನಿಧಾನವಾಗಿ ಸುಳ್ಳು (ತಪ್ಪಾದ) ಬೊಧನೆಗಳು ಸಭೆಯಲ್ಲಿ ಪ್ರವೇಶಿಸಿದ್ದವುಗಳು ಯಾವದೆಂದರೆ –

ಮೊದಲ ಸುಳ್ಳು (ತಪ್ಪಾದ) ಬೋಧನೆಯನ್ನು ಪರಿಚಯಿಸಿದ್ದು ಯಾವುದೆಂದರೆ ಸಾಮಾನ್ಯವಾಗಿ ಕ್ರೈಸ್ತಧರ್ಮವಲ್ಲದ ವ್ಯಕ್ತಿ ನಂಬುವಂತಹ –

**ಸಾಯದೆ ಇರುವ, ಅಮರತ್ವವುಳ್ಳ ಆತ್ಮ.**



ಹೌದು! ಅದು ಹಕ್ಕು ಸಾಧಿಸಿದ್ದೇನೆಂದರೆ ಮನುಷ್ಯನಿಗೆ ಆತ್ಮ "ಇದೆ". ಆದರೆ ಸತ್ಯವೇದವು ಬೋಧಿಸುವದೇನೆಂದರೆ – "ಮನುಷ್ಯನೇ" ಆ ಆತ್ಮ (ಆದಿಕಾಂಡ 2:7)

ಆದ್ದರಿಂದ ಅದು ನಂತರ ಹಕ್ಕುಸಾಧಿಸಿದ್ದೇನೆಂದರೆ ಶರೀರವು ಸಾಯುತ್ತದೆ ಆದರೆ "ಅಂತರಂಗದ" ಆತ್ಮ ಸಾಯುವುದಿಲ್ಲ ಮತ್ತು ಸಾಯಲು ಸಾಧ್ಯವಿಲ್ಲ!!

ಬೇರೆ (ನಂತರದ) ಸುಳ್ಳುಬೊಧನೆಯನ್ನು ಕ್ರೈಸ್ತಧರ್ಮವಲ್ಲದ ವ್ಯಕ್ತಿ ಸಾಮಾನ್ಯವಾಗಿ ನಂಬುವದೇನೆಂದರೆ –

## ನರಕವೆಂಬದು ನಿತ್ಯಯಾತನೆಯುಳ್ಳ ಸ್ಥಳವಾಗಿದೆ.



ಮತ್ತೆ ಇದು ಸತ್ಯವೇದದ ಬೋಧನೆ ಹೇಳುವಂತೆ ನರಕವೆಂಬದು ಒಂದು "ಸ್ಥಿತಿ"ಯಾಗಿದೆ ಮತ್ತು ಅದೊಂದು ಸ್ಥಳ ಅಲ್ಲವೆಂಬುದಕ್ಕೆ ವಿರೋಧವಾಗಿ ಬೋಧಿಸುತ್ತದೆ.

ಇದೊಂದು ನಿತ್ಯನಾಶನದ ಸ್ಥಿತಿಯಾಗಿದೆ (ಮತ್ತಾಯ 10:28)

ಎಲ್ಲಾ ಆತ್ಮಗಳು ನರಕಕ್ಕೆ ಹೋಗುತ್ತದೆ!!!

ಯೇಸು ಸಹ ನರಕಕ್ಕೆ ಹೋದನು!!

.......ಮತ್ತು ಎಲ್ಲಾ ಆತ್ಮಗಳು ಪುನರುತ್ಥಾನದ ದಿನದಂದು ಎದ್ದುಬರುವರು!

ಆದರೆ ಪೋಪರು ಹಕ್ಕುಸಾಧಿಸುವದೇನೆಂದರೆ ಸ್ವತಃ ದೇವರೇ ಈ ನಿತ್ಯಯಾತನೆ ಮತ್ತು ಚಿತ್ರಹಿಂಸೆಯ ಸ್ಥಳವನ್ನು ಸೃಷ್ಟಿಸಿದ್ದು ಎಲ್ಲಾ "ಕೆಟ್ಟ" ಮತ್ತು ಪೋಪರ "ವಿರೋಧಿ"ಗಳು ಈ ಸ್ಥಳಕ್ಕೆ ಹೋಗುವರು!!

ಇನ್ನೊಂದು ಸುಳ್ಳು (ತಪ್ಪಾದ) ಬೊಧನೆ ಯಾವುದೆಂದರೆ –

## ಪುರ್ಗೇಟರಿ (ಮರಣಾನಂತರದ ಪ್ರಾಯಶ್ಚಿತ್ತದ ಸ್ಥಳ)

ಹೌದು! ಅವರು ಹಕ್ಕುಸಾಧಿಸುವದೇನೆಂದರೆ ಅಧಿಕವಾದ ಆತ್ಮಗಳು ಪರಲೋಕಕ್ಕೆ

ಹೋಗಲು "ಬಹಳ ಓಳ್ಳೆಯವರೂ" ಅಲ್ಲ ಅಥವಾ ನರಕಕ್ಕೆ ಹೋಗಲು "ಬಹಳ ಕೆಟ್ಟವರೂ" ಅಲ್ಲ.

ಆದ್ದರಿಂದ ಅವರು ಹಕ್ಕುಸಾಧಿಸುವದೇನೆಂದರೆ ಅಂತಹ ಆತ್ಮಗಳು ನಿಯಮಿತ ಕಾಲದವರೆಗೆ ಅವರ ಪಾಪಕ್ಕಾಗಿ ಸ್ವಲ್ಪ ಚಿತ್ರಹಿಂಸೆ ಮತ್ತು ಯಾತನೆಯನ್ನು ಅನುಭವಿಸಿದ ನಂತರ ಅವರು ಪರಲೋಕಕ್ಕೆ ಹೋಗಲು ಅರ್ಹರಾಗುತ್ತಾರೆ!

**ಸತ್ಯವೇದದಲ್ಲಿ ಇಂತಹ ಬೋಧನೆ ಇಲ್ಲವೇ ಇಲ್ಲ!**

ನಂತರ ಇನ್ನೊಂದು ಸುಳ್ಳು (ತಪ್ಪಾದ) ಬೋಧನೆ ಯಾವದೆಂದರೆ –

**ಫಾದರ್ಗೆ [FATHER] ತಮ್ಮ ಪಾಪಗಳನ್ನು ಹರಕೆಮಾಡುವದು.**

ಹೌದು! ಪಾಪಗಳ ಭಾರಗಳು ಹಗುರವಾಗಬೇಕು ಮತ್ತು ಫಾದರ್ (father) ಹಕ್ಕುಸಾಧಿಸುವದೇನೆಂದರೆ ಪಾಪಗಳನ್ನು ಮನ್ನಿಸುವ ಅಧಿಕಾರ ಅವರಿಗಿದೆ.

ಆದ್ದರಿಂದ ಫಾದರ್ "ಪರಸ್ಪರ ಪಟ್ಟಿಗಳಿಂದ ಹೆಣೆದಿರುವ" ಮಧ್ಯೆ ಮಧ್ಯೆ ಕಿಂಡಿಗಳ್ಳುಳ್ಳ ಅಡ್ಡಪಟ್ಟಿಗಳ ಚೌಕಟ್ಟಿನ ಹಿಂದೆ ಕುಳಿತು ಜನರು ಹೇಳುವ "ಪಾಪಗಳನ್ನು" ಕೇಳಿ ಮನ್ನಿಸುವಿಕೆಯನ್ನು ಉಚ್ಚರಿಸುತ್ತಾರೆ.



ಈ ತಪ್ಪಾದ ಬೋಧನೆಯನ್ನು ಮಾರ್ಟಿನ್ ಲೂಥರ್ನವರು ಮೊದಲು ಸುಧಾರಣೆಯಲ್ಲಿ ಕೆಳಗಿನ ವಾಕ್ಯದ ಮುಖಾಂತರ ಈ ಮಹಾ ಸತ್ಯವನ್ನು ಕಂಡುಹಿಡಿದರು –

**ರೋಮಾಪುರದವರಿಗೆ 1:17 – "ಹೇಗೆಂದರೆ ದೇವರಿಂದ ದೊರಕುವ ನೀತಿಯು ಅದರಲ್ಲಿ ತೋರಿಬರುತ್ತದೆ. ನೀತಿವಂತನು ನಂಬಿಕೆಯಿಂದಲೇ ಬದುಕುವನೆಂಬ ಶಾಸ್ತ್ರೋಕ್ತಿಯ ಪ್ರಕಾರ ಆ ನೀತಿಯು ನಂಬಿಕೆಯ ಫಲವಾಗಿದ್ದು ನಂಬಿಕೆಯನ್ನು ಪ್ರಕಟಿಸುವಂಥದಾಗಿದೆ."**

ನಂತರ ಮತ್ತೊಂದು ತಪ್ಪಾದ ಬೋಧನೆ ಬಂದಿತು –

**"ಪ್ರಾರ್ಥನಾ ಕೂಟದಲ್ಲಿ" (prayer meeting) ಯೇಸುವಿನ ಪದೇಪದೇ ಯಜ್ಞಬಲಿ ಅರ್ಪಿಸುವದು.**

ಇದೊಂದು ಮಹಾ ಅಸಹ್ಯ ಹುಟ್ಟಿಸಿವಂತದಾಗಿದ್ದು ಒಂದೇ ಸಾರಿ ಈಡುಬಲಿಯನ್ನು ಕಲ್ವಾರಿ ಸಿಲುಬೆಯಲ್ಲಿ ಯೇಸು ಅರ್ಪಿಸಿದರ ಬೆಲೆಯನ್ನು ನಾಶಮಾಡುವಂಥದ್ದಾಗಿದೆ (**ಇಬ್ರಿಯರಿಗೆ** 10:12)



....ಮತ್ತು ಹಕ್ಕು ಸಾಧಿಸುವದೇನೆಂದರೆ "ಪ್ರಾರ್ಥನಾ ಕೂಟದಲ್ಲಿ ಯಜ್ಞಬಲಿ" ಎಂದು ಕರೆಯಲ್ಪಡುವ ಯಜ್ಞಬಲಿಯನ್ನು ಪದೇ ಪದೇ ನಡೆಸಲಾಗುತ್ತದೆ.

ಇದು ಹೇಗೆಂದರೆ, ರೊಟ್ಟಿಯನ್ನು ದ್ರವ್ಯಾಂತರ ಮಾಡುವದು ಮತ್ತು ದ್ರಾಕ್ಷಾರಸವನ್ನು ಯೇಸುವಿನ ನಿಜವಾದ ದೇಹ ಮತ್ತು ರಕ್ತವನ್ನಾಗಿ ಮಾಡುವದು!!

ಆದ್ದರಿಂದ, "ರಾತ್ರಿಭೋಜನದ ದ್ರವ್ಯಾಂತರ ರೊಟ್ಟಿ"ಯನ್ನು ಹಲ್ಲುಗಳಲ್ಲಿ ಕಚ್ಚಬಾರದು ಎಂಬ ಕಟ್ಟುಕತೆಯ ನಂಬಿಕೆಯನ್ನು ತರಲಾಯಿತು ಮತ್ತು ಅವರು ಹಕ್ಕುಸಾಧಿಸುವದೇನೆಂದರೆ ಯಾರ್ಯಾರು ಆ ರೀತಿ "ದ್ರವ್ಯಾಂತರ ರೊಟ್ಟಿ"ಯನ್ನು

ಕಚ್ಚಿ ತಿಂದಿದ್ದಾರೋ ಅಂತವರಿಗೆ ಬಾಯಿಂದ ರಕ್ತಬರುವ ಪ್ರಸಂಗ ಉಂಟಾಗಿದೆ ಎನ್ನುತ್ತಾರೆ!!!

**ಇದೊಂದು ..........ತಲತಲಾಂತರದಿಂದ ರೋಮನ್ ಕ್ಯಾಥೋಲಿಕ್ರವರ ಬಲವಾದ ನಂಬಿಕೆಯಾಗಿದೆ!!**

ನಂತರ, ಮತ್ತೊಂದು ತಪ್ಪಾದ ಬೋಧನೆ ಬಂದಿತು –

**ಆರಾಧನೆಯ ಸ್ಥಳಕ್ಕೆ ಭ್ರಮ್ಮಾಂಡವಾದ ಕಟ್ಟಡಗಳು ಅಥವಾ "ಸಭೆಗಳು"**

ಕ್ರೈಸ್ತ ಧರ್ಮಕ್ಕೆ ಸೇರದ ಬೇರೆ ಭ್ರಮ್ಮಾಂಡವಾದ ದೇವಾಲಯಗಳನ್ನು ನೋಡಿ ಮತ್ತು ಬೇರೆ ಜಾತಿಯನ್ನು ನೋಡಿ ಅವರು ಯೋಚಿಸಿದ್ದೇನೆಂದರೆ "ದೇವರಿಗೆ ಘನವನ್ನು" ಸಲ್ಲಿಸಲು ಮಹತ್ತರವಾದ ಮತ್ತು ಭ್ರಮ್ಮಾಂಡವಾದ ಆರಾಧನಾ ಸ್ಥಳಗಳನ್ನು ಕಟ್ಟಬೇಕು!!

ಆದ್ದರಿಂದ ಜನರಿಗೆ "ಸಭೆ" ಎಂದರೆ ಅದೊಂದು ಕಟ್ಟಡ ಎಂದು ಆಗಿಹೋಯಿತು!

ಆದಿಸಭೆಗಳಲ್ಲಿ (ಯೇಸುವಿನ ಶಿಶ್ಯರು) ಮನೆಗಳಲ್ಲಿ ಭೇಟಿಮಾಡಿ ಪ್ರಾರ್ಥಿಸಿದಂತಹ ಸರಳತೆಯು ಹೊರಟುಹೋಯಿತು.



ನಿಜಾಂಶವೇನೆಂದರೆ, ಭವ್ಯವಾದ ಕಟ್ಟಡಗಳನ್ನು ಕಟ್ಟುವ ಆ ಪ್ರಯತ್ನ ಎಷ್ಟು ಹೆಚ್ಚು ಮಟ್ಟದಲ್ಲಿತ್ತು ಎಂದರೆ ಆ ಭವ್ಯವಾದ ಮತ್ತು ಅತಿದೊಡ್ಡದಾದ ಕಟ್ಟಡಗಳನ್ನು "ಕ್ಯಾಥೆಡ್ರಲ್ಸ್" ಎಂದು ಕರೆಯಲಾಯಿತು ಮತ್ತು ದೇವರು ನಿಜವಾಗಿ ಮನುಷ್ಯರಲ್ಲಿ ಹುಡುಕುವ "ಕ್ರಿಸ್ತನ ಸ್ವರೂಪ"ವನ್ನು ಬಿಟ್ಟು ಕಟ್ಟಡಗಳನ್ನು ಕಟ್ಟುವದರಲ್ಲಿ ಪ್ರಯಾಸಪಡುತ್ತಿದ್ದರು!!

ನಂತರ ಇನ್ನೊಂದು ತಪ್ಪಾದ ಬೋಧನೆ ಎದ್ದೇಲಿತು –

**"ಕ್ಲೆರ್ಗಿ"ಯವರು "ಲೇಯಿಟಿ"ಗಿಂತ ವ್ಯಾತ್ಯಾಸವಾಗಿದ್ದರು.**

ಹೌದು! ಆರಾಧನೆಯಲ್ಲಿ ಜನರನ್ನು ನಡೆಸುವಾತನು ವಿಶೇಷದವರಾಗಿದ್ದು ದೇವರ ವಿಶೇಷ ಸೇವಕರು ಎಂದು ಹಕ್ಕುಸಾಧಿಸಿದರು ಮತ್ತು ಅವರನ್ನು "ಕ್ಲೆರ್ಗಿ" (CLERGY ) ಎಂದು ಕರೆಯಿಸಿಕೊಳ್ಳುತ್ತಿದ್ದರು.

ಮತ್ತು ಸಾಮಾನ್ಯ ಜನರನ್ನು "ಲೇಯಿಟಿ" (LAITY) ಎಂದು ಕರೆಯಲಾಯಿತು.



ಇವರಿಬ್ಬರಲ್ಲಿ ಸ್ಪಷ್ಟವಾದ ವ್ಯತ್ಯಾಸವನ್ನು ಸ್ಥಾಪಿಸಲು "ಕ್ಲೆರ್ಗೆ"ಯವರು ಭವ್ಯವಾದ ಉಡುಪನ್ನು ವಿಧವಿಧ ಬಣ್ಣದಲ್ಲಿ ಧರಿಸಿಕೊಂಡು ಗುಡಾರದ ಮಹಾಯಾಜಕನಂತೆ ಕಾಣಿಸಿಕೊಂಡರು!!!

ನಂತರ ಮತ್ತೊಂದು ತಪ್ಪಾದ ಬೋಧನೆ ಬಂದಿತು –

## ಸಂತರನ್ನು ಆರಾಧಿಸುವದು ಮತ್ತು ಪ್ರಾರ್ಥಿಸುವದು.

ಕ್ರಮೇಣವಾಗಿ ಒಂದೇ ಒಂದು "ದಾರಿ"ಯಾದ ಯೇಸುವಿನ ಮೂಲಕ (ಯೋಹಾನ 14:6) ದೇವರನ್ನು ಆರಾಧಿಸುವದು ಬಿಟ್ಟು ಬೇರೆ "ದಾರಿ"ಗಳಿಗೆ ಮಾರ್ಗ ಬದಲಾಯಿಸಲಾಯಿತು –

ಉದಾ: ಯೇಸುವಿನ ತಾಯಿಯಾದ ಮರಿಯಳು ಮತ್ತು ನಂತರ ಬೇರೆ ಬೇರೆ "ಸಂತರು".

ಆದ್ದರಿಂದ ಕಾಲ ಕ್ರಮೇಣವಾಗಿ ಮರಿಯಳು ಮತ್ತು ಈ "ಸಂತ"ರನ್ನು ಆರಾಧಿಸುವದು ಮತ್ತು ಪ್ರೀತಿಸುವುದರ (**ADORATION**) ಬೆಳವಣಿಗೆ ಉಂಟಾಯಿತು.

ಇದರಿಂದ ಮತ್ತೊಂದು ತಪ್ಪಾದ ಬೋಧನೆ ಉಂಟಾಯಿತು –

## ತ್ರೈಯೇಕತ್ವ (THE TRINITY)

ಹೌದು! ಕ್ರಮೇಣವಾಗಿ "ಒಬ್ಬನೇನಿಜವಾದ ದೇವರು" ಎಂಬ ಸತ್ಯವು ಕಳೆದುಕೊಂಡಿತು ಮತ್ತು ತಂದೆ ಮತ್ತು ಯೇಸುವಿನ ಮಧ್ಯದಲ್ಲಿ ಇರುವ ಗುರುತಲ್ಲಿ ಗಲಭೆಯಾಗಿ, ನಂತರ ಅವರು ಹಕ್ಕು ಸಾಧಿಸಿದ್ದೇನೆಂದರೆ ಅವರಿಬ್ಬರೂ ಒಂದೇ ವ್ಯಕ್ತಿ ಎಂದು ಹೇಳಿದರು!

ಸ್ವಲ್ಪಕಾಲದ ನಂತರ ದೇವರ ಬಲವಾದ – ಪವಿತ್ರಾತ್ಮವನ್ನು ಒಬ್ಬ ವ್ಯಕ್ತಿಯನ್ನಾಗಿ ಮಾಡಿ, ತಂದೆ ಮತ್ತು ಮಗನೊಂದಿಗೆ ಪವಿತ್ರಾತ್ಮವೂ ಒಂದೇ ಎಂದು ಹೇಳಿದರು.

**ಆದ್ದರಿಂದ, ಗಲಭೆಉಂಟಾಗಿ ದೇವದೂಷಣೆಯ ಬೋಧನೆಯಾದ ತ್ರೈಯೇಕತ್ವವನ್ನು ಉಂಟುಮಾಡಿದರು**

ಹೀಗೆ ಇನ್ನೂ ಅನೇಕ ತಪ್ಪಾದ ಬೋಧನೆಗಳು ಸಭೆಯ ನಂಬಿಕೆಯಲ್ಲಿ ಪ್ರವೇಶಿಸಿದ್ದನ್ನು ನೋಡಬಹುದು.

ಆದ್ದರಿಂದ ಸಭೆಯನ್ನು ದೊಡ್ಡ ತಪ್ಪುಗಳಲ್ಲಿ ಕೊಂಡೊಯ್ಯಲಾಯಿತು ಮತ್ತು ಈ ಬೋಧನೆಗಳನ್ನು ಮತ್ತಾಯ 13:25 ರಲ್ಲಿ

ಈ "ಬೀಜ"ವನ್ನು "ಹಣಜಿ" ಎಂದು ಸೂಚಿಸಲಾಗಿದೆ ಮತ್ತು
ಈ ಹಣಜೆಯು ತಪ್ಪಾದ ಮಕ್ಕಳನ್ನು ಪಡೆದಿದೆ ಅಥವಾ ಮತ್ತಾಯ 13:38ರಲ್ಲಿ
ನೋಡುವಂತೆ
"ಸೈತಾನನನವರು" ಅಥವಾ ತಪ್ಪಾದ ಬೋಧನೆಗಳು ಮತ್ತು ಸುಳ್ಳುಗಳ
ಕ್ರಿಸ್ತ ವಿರೋಧಿಯ ವ್ಯವಸ್ಥೆಯಾಗಿದ್ದಾರೆ ಎಂದು ನೋಡುತ್ತೇವೆ.

ಆದ್ದರಿಂದ ಕ್ರಿಸ್ತವಿರೋಧಿಯು **"ದೇವಾಲಯದಲ್ಲಿ (ಸಭೆಯಲ್ಲಿ) ದೇವರೆಂದು ಕುಳಿತು ತನ್ನನ್ನೇ ದೇವರೆಂದು ತೋರಿಸಿಕೊಳ್ಳುತ್ತಾನೆ"**

**(ಸರ್ವಶಕ್ತನೆಂದು)** –

ಆದ್ದರಿಂದ ತಮಿಳಿನಲ್ಲಿ ಪೋಪನ್ನು "ಪೋಪ್ ಆಂಡವರ್" ಅಂದರೆ "ಕರ್ತನಾದ ಪೋಪ್" ಎಂದು ಸೂಚಿಸಲಾಗಿದೆ!

ಈಗ ನಾವು ಈ
ಕ್ರಿಸ್ತವಿರೋಧಿಯನ್ನು ಕುರಿತು ಇನ್ನೊಂದು ವಾಕ್ಯದಲ್ಲಿ ಓದೋಣ –

**ಮತ್ತಾಯ 24:15**

**"ಆದ್ದರಿಂದ ಪ್ರವಾದಿಯಾದ ದಾನಿಯೇಲನು ಹೇಳಿದಂಥ ಹಾಳು ಮಾಡುವ ಅಸಹ್ಯ ವಸ್ತುವು ಪವಿತ್ರಸ್ಥಾನದಲ್ಲಿ ನಿಂತಿರುವದನ್ನು ನೀವು ಕಾಣುವಾಗ (ಇದನ್ನು ಓದುವವನು ತಿಳುಕೊಳ್ಳಲಿ)"**

ಹೌದು! ಈ ಕ್ರಿಸ್ತವಿರೋಧಿಯನ್ನು ಇಲ್ಲಿ **"ಹಾಳು ಮಾಡುವ ಅಸಹ್ಯ ವಸ್ತು"** ಎಂದು ಸೂಚಿಸಲಾಗಿದೆ (**ದಾನಿಯೇಲನು** 12:11)

– ಸೈತಾನನ ವಂಚನೆಯುಳ್ಳ ಕ್ರಿಸ್ತವಿರೋಧಿಯ ವ್ಯವಸ್ಥೆ!

– "**ಅಧರ್ಮ ಸ್ವರೂಪನು**" – 2 **ಥೆಸಲೋನಿಕದವರಿಗೆ** 2:7

ಹೌದು! ಈ ಪೋಪ್ ಎಂಬುವವನು "ಅಸಹ್ಯ ವಸ್ತು"ವಿನ ವ್ಯವಸ್ಥೆ ಯಾಗಿದ್ದು
ಸತ್ಯವೇದದಲ್ಲಿನ
ಸತ್ಯಗಳಾದ ಅತಿ ಪರಿಶುದ್ಧ ನಂಬಿಕೆಯನ್ನು "ಹಾಳುಮಾಡುವ" ಅಥವಾ
ನಾಶಮಾಡುವವನಾಗಿದ್ದಾನೆ!

ನಮ್ಮ ಕರ್ತನಾದ ಯೇಸು ಇದನ್ನು ಕುರಿತು ಹೀಗೆ ಎಚ್ಚರಿಸಿದ್ದಾನೆ –

**ಯೋಹಾನ 5 : 43**

**"ಯಾಕೆಂದರೆ ಅನೇಕರು ಬಂದು ನನ್ನ ಹೆಸರನ್ನು ಎತ್ತಿಕೊಂಡು - ನಾನು ಕ್ರಿಸ್ತನು, ನಾನು ಕ್ರಿಸ್ತನು ಎಂದು ಹೇಳಿ ಎಷ್ಟೋ ಜನರನ್ನು ಮೋಸಗೊಳಿಸುವರು."**

ಆದ್ದರಿಂದ ಕ್ರಿಸ್ತವಿರೋಧಿಯ ವ್ಯವಸ್ಥೆಯು ಯೇಸುವಿನ ಹೆಸರನ್ನು ಉಪಯೋಗಿಸಿಕೊಂಡು ಆತನು ಕ್ರಿಸ್ತನಾಗಿದ್ದು, ಪೋಪನು ಶರೀರವಾಗಿರುವ ಅಂಗಗಳಿಗೆ ತಲೆಯಾಗಿರುವನು.

ಆದರೆ ಇದು ಹಾಗಲ್ಲದೆ ಎಫೆಸದವರಿಗೆ 1:22 ರಲ್ಲಿ ನೋಡುವ ಹಾಗೆ ನಿಜವಾದ ಕ್ರಿಸ್ತನ ವ್ಯವಸ್ಥೆಯಲ್ಲಿ ಯೇಸು ತಲೆಯಾಗಿದ್ದು ಆತನ ಕೈಕೆಳಗಿರುವವರೆಲ್ಲರೂ ಆತನ ಶರೀರದ ಅಂಗಗಳಾಗಿರುವರು.

ನಂತರ ಈ ಕ್ರಿಸ್ತವಿರೋಧಿಯ ವ್ಯವಸ್ಥೆಯನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಹೀಗೆ ಓದುತ್ತೇವೆ –

**ದಾನಿಯೇಲನು 7:21**

**"ನಾನು ನೋಡಲಾಗಿ ಆ ಕೊಂಬು ಪರಿಶುದ್ಧರ ಸಂಗಡ ಯುದ್ಧಮಾಡಿತು ಮತ್ತು ಅವರಿಗೆ ವಿರೋಧವಾಗಿ ಜಯಗಳಿಸಿತು;"**

ಹೌದು! ಇದು ಪೋಪ್ ವ್ಯವಸ್ಥೆಯು ನಿಜವಾದ ಕ್ರೈಸ್ತರು ಮತ್ತು ಸತ್ಯವೇದದ ವಿಶ್ವಾಸಿಗಳನ್ನು ಭಯಂಕರವಾಗಿ ಹಿಂಸೆಗೆ ಒಳಪಡಿಸಿತು.

## ಕಾಲವನ್ನು ಅಂಧಕಾರದ ಯುಗ ಎಂದು ಕರೆಯಲಾಯಿತು

ಪೋಪನ ವ್ಯವಸ್ಥೆಯು 1300 ವರ್ಷಗಳಲ್ಲಿ ನೇರವಾಗಿ ಅಥವಾ ಪರೋಕ್ಷವಾಗಿ 50,000,000 ಅಥವಾ 5 ಕೋಟಿ ಜನರನ್ನು ಕೊಂದುಹಾಕಿದ್ದಾರೆ....!!

ಈ ರೀತಿಯಾಗಿ ಕೊಳ್ಳುವದನ್ನು ಮತ್ತು ಚಿತ್ರಹಿಂಸೆ ಕೊಡುವದನ್ನು "ತನಿಖೆ" ಅಥವಾ "ಪರಿಶುದ್ಧ ಉದ್ಯೋಗ" ಎಂದು ಕರೆಯಲಾಯಿತು.

ಅವರನ್ನು ಕೊಳ್ಳುವ ವಿಧಾನವು ಬರ್ಬರವಾಗಿಯೂ ಮತ್ತು ಬಲು

ಕ್ರೂರತನವಾಗಿಯೂ ಇತ್ತು. ಮತ್ತು ಅವು ಯಾವುದೆಂದರೆ –

**ಸಾವಿಗೆ ಸುಡುವುದು** "ಸ್ಟೇಕ್" ಎಂದು ಕರೆಯಲ್ಪಡುವ ಒಂದು ಕಂಬಕ್ಕೆ ಕಟ್ಟಿ ಹಾಕಿ ಅದರ ಸುತ್ತಲೂ ಸ್ವಲ್ಪ ದೂರದಲ್ಲಿ ಬೆಂಕಿ ಹಚ್ಚಿ ನಿಧಾನವಾಗಿ ಸುಟ್ಟು ನೋವಿನಿಂದ ಬೆಂದು ಸಾಯಲು ಬಿಡುತ್ತಿದ್ದರು.

**ಇರಿದು ಕೊಲ್ಲುವುದು...** ದೇಹವನ್ನು ಕತ್ತಿಯಿಂದ ಎಲ್ಲಾ ಭಾಗಗಳಲ್ಲಿ ಇರಿದು ರಕ್ತ ಸುರಿದು ಸಾಯುವ ತನಕ ಹಿಂಸೆ ಮಾಡು ವದು.

**ಚೂಪಾದ ಕತ್ತಿಯನ್ನು ಚಕ್ರಕ್ಕೆ ಅಳವಡಿಸಿ...** ನಿಧಾನವಾಗಿ ,ಸ್ವಲ್ಪ ಸ್ವಲ್ಪ ವಾಗಿ ದೇಹವನ್ನು ತುಂಡು ತುಂಡು ಮಾಡಿ ಕೊಲ್ಲುವದು.



**ಕರಗಿದ ಸೀಸವನ್ನು** ...ಕಿವಿಗೆ ಸುರಿಯಲಾಯಿತು!!

**ಕಣ್ಣುಗಳನ್ನು**...ಕಿತ್ತಿ ಹೊರತೆಗೆಯಲಾಯಿತು.


**ಉಗುರುಗಳನ್ನು... ಕಿತ್ತುಹಾಕಲಾಯಿತು.**

**ಎತ್ತರವಾದ ಸ್ಥಳದಿಂದ ವ್ಯಕ್ತಿಯನ್ನು ಕೆಳಗೆ ಮೊದಲೇ ನಿಲ್ಲಿಸಿದ ಚೂಪಾದ ಕಬ್ಬಿಣಗಳ ಮೇಲೆ ಬೀಳುವಂತೆ ಮಾಡಿ,** ನಂತರ ಆತನು ನಿಧಾನವಾಗಿ ರಕ್ತ ಸುರಿದು ಸಾಯುವ ಹಾಗೆ ಮಾಡುತ್ತಾರೆ.

**ಬಂದೂಕು ಸಿಡಿ ಮದ್ದನ್ನು ಬಾಯಿಯೊಳೊಗೆ ಇಟ್ಟು,** ನಂತರ ಬಂದೂಕಿನಿಂದ ಸುಟ್ಟು ತಲೆ ತುಂಡು ತುಂಡಾಗಿ ಚೆದರುವಂತೆ ಮಾಡಿ ದರು!!


➡ **ತುಂಬಾ ಸಮಯದವರೆಗೆ ಆಹಾರವನ್ನು ಕೊಡದೆ,** ಹಸಿವಿನಿಂದಲೆ ಸಾಯುವ ಹಾಗೆ ಮಾಡುವದು.

➡ **"ಏರ್ ಬೆಲ್ಲೋಸ್"** ಎಂಬ "ಪಂಪ್" ನಿಂದ ಗಾಳಿಯನ್ನು ದೇಹದಲ್ಲಿ ಸೇರಿಸಿ ಹೊಟ್ಟೆ ಸಿಡಿಯುವಂತೆ ಮಾಡುವುದು!!




➡ ಉಸಿರುಗಟ್ಟಿ ಸಾಯುವಂತೆ ತನ್ನ ಮಾಂಸದ ತುಂಡನ್ನು ತನ್ನ ಬಾಯಿಯಲ್ಲಿಡುತ್ತಿದ್ದರು ಮತ್ತು  ಮಲ ಮೂತ್ರವನ್ನು ಸಹ ಬಾಯಲ್ಲಿಡುತ್ತಿದ್ದರು!!

➡ **ಸ್ತ್ರೀಯರನ್ನು ತಮ್ಮ ಕೂದಲುಗಳಿಂದಲೇ ...** ನೇಣು ಹಾಕಿ ಸಾಯಿಸುವುದು!



➡ **ನಂತರ ಮರಿಯಳ ಮೂರ್ತಿಯನ್ನು ತಂದು ಅದರ ಮುಂಭಾಗದಳೆಲ್ಲಾ ಚೂಪಾದ ಬ್ಲೇಡ್ ಗಳನ್ನು ಅಳವಡಿಸಿ ಆ ಮೂರ್ತಿಯನ್ನು ಅಪ್ಪಿ ಕೊಳ್ಳುವಂತೆ ಮಾಡುತ್ತಿದ್ದರು!!**

ಸತ್ಯವೇದವನ್ನು ನಂಬುವ ಕ್ರೈಸ್ತರನ್ನು ಭಯಾನಕವಾದ ಮೂರ್ತಿಯ ಮುಂದೆ ನಿಲ್ಲಿಸಿ ಆತನ/ಆಕೆಯ ನಂಬಿಕೆಯನ್ನು ನಿರಾಕರಿಸಲು ಹೇಳುತ್ತಿದ್ದರು. ಇಲ್ಲದಿದ್ದರೆ ಅವರನ್ನು ಆ ಮರಿಯಳ ಮೂರ್ತಿ ಮತ್ತು "ಸಾವಿನ ಅಪ್ಪುವಿಕೆ"ಯ ಮೂರ್ತಿಯ ಮೇಲೆ ತಳ್ಳಿಬಿಡುವರೆಂದು ಹೇಳುತ್ತಿದ್ದರು!!



.....ಮತ್ತು ಇಲ್ಲಿ ಹೇಳಲಾಗದ ಹಾಗಿರುವ ಅನೇಕ ಭಯಂಕರವಾದ ರೀತಿಯಲ್ಲಿ ಸಾಯಿಸುತ್ತಿದ್ದರು.

ಚಿತ್ರಹಿಂಸೆ ಪಡಿಸುವಾಗ ವೈದ್ಯರನ್ನು ನೋಡಿಕೊಳ್ಳುವದಕ್ಕೆ ಇಡುತ್ತಿದ್ದರು ಮತ್ತು ಅಂತಹ ಬಲಿಪಶುಗಳನ್ನು ಇನ್ನೇನು ಸಾಯುವ ಹಾಗಿದ್ದಾರೆ ಎನ್ನುವವರನ್ನು ಗುರುತಿಸಿ, ಚಿತ್ರ ಹಿಂಸೆ ಪಡಿಸುವದನ್ನು (ಸ್ವಲ್ಪಕಾಲ) ನಿಲ್ಲಿಸುತ್ತಿದ್ದರು. ಇದರಿಂದ ಆ ಬಲಿಪಶುವು ಸ್ವಲ್ಪ ಸುಧಾರಿಸಿಕೊಂಡು

**ಗುಣಮುಖವಾಗುವದರೊಳಗೆ ಮತ್ತೆ ಚಿತ್ರಹಿಂಸೆಯನ್ನು ಕೊಡಲಾರಂಬಿಸುವರು. ಆದ್ದರಿಂದ ಅವರಿಗೆ ಸಾಧ್ಯವಾದಷ್ಟು ಅತ್ಯಧಿಕವಾದ ಚಿತ್ರ ಹಿಂಸೆಗಳನ್ನು ಕೊಡುತ್ತಿದ್ದರು!!**

**ಅದಕ್ಕೆ ಅವರು ಕಾರಣ ಕೊಡುವದೇನೆಂದರೆ ಸ್ವತಃ ದೇವರೇ ಆ ಬಲಿಪಶುಗಳನ್ನು ನರಕವೆಂಬ ನಿತ್ಯಯಾತನೆಗೆ ಕಳುಹಿಸುವನು!!**

## ಅವರು ಇವೆಲ್ಲವನ್ನು ದೇವರ ಮತ್ತು ಕ್ರಿಸ್ತನ ಹೆಸರಿನಲ್ಲಿ ಮಾಡಿದರು!!

ಹೀಗಷ್ಟೇ (ದಿವಂಗತ) ಪೋಪ್ ಜಾನ್ ಪಾಲ್ 2 ಅವರು ಈ ಭಯಂಕರ ಮತ್ತು ಅತಿಕ್ರೂರತನಕ್ಕೆ ಕ್ಷಮೆಯಾಚಿಸಿದರು! ಈಗ ನಾವು ಅಪೋಸ್ತಲನಾದ ಯೋಹಾನನಿಗೆ ಆ ಕ್ರಿಸ್ತ ವಿರೋಧಿಯ ಕ್ರೂರತ್ವದ ದರ್ಶನವನ್ನು ನೋಡಿ ಆತನಿಗೆ ಏನು ಅನಿಸಿತು ಎಂದು ಬೆರೆದಿರುವದನ್ನು ಕೆಳಗಿನ ವಾಕ್ಯದಲ್ಲಿ ಓದೋಣ –

**ಪ್ರಕಟನೆ 17:6**

**"ಆ ಸ್ತ್ರೀಯು ದೇವಜನರ ರಕ್ತವನ್ನೂ ಯೇಸುವಿಗೋಸ್ಕರ ಸಾಕ್ಷಿಕೊಟ್ಟು ಹತರಾದವರ ರಕ್ತವನ್ನೂ ಕುಡಿದು ಮತ್ತಳಾಗಿರುವದನ್ನು ಕಂಡೆನು. ನಾನು ಅವಳನ್ನು ನೋಡಿ ಅತ್ಯಾಶ್ಚರ್ಯಪಟ್ಟೆನು."**

ಹೌದು! ಪ್ರಕಟಣೆಗಾರನಾದ ಯೋಹಾನನು ಆಗ ಕ್ರಿಸ್ತ ವಿರೋಧಿ ವ್ಯವಸ್ಥೆಯನ್ನು ಸರಿಯಾಗಿ ಹೇಗೆ ಚಿತ್ರಿಸಿದ್ದಾನೆಂದರೆ( ವಿವರಿಸಿದ್ದಾನೆಂದರೆ), ಆ ಪೋಪ್ ವ್ಯವಸ್ಥೆಯು :

**"ದೇವಜನರ ರಕ್ತವನ್ನೂ ಯೇಸುವಿಗೋಸ್ಕರ ಸಾಕ್ಷಿ ಕೊಟ್ಟು ಹತರಾದವರ ರಕ್ತವನ್ನೂ ಕುಡಿದು."**

**"... ಮತ್ತು ನಾನು ಅವಳನ್ನು ನೋಡಿ ಅತ್ಯಾಶ್ಚರ್ಯ ಪಟ್ಟೆನು."**

ಎಂದು ಯೋಹಾನನು ಹೇಳುತ್ತಾನೆ.

ನಿಜವಾಗಿಯೂ ಕ್ರಿಸ್ತವಿರೋಧಿಯ ವ್ಯವಸ್ಥೆಯನ್ನು ದೇವಜನರನ್ನು ಅಷ್ಟುಮಟ್ಟಿಗೆ ಆಳ್ವಿಕೆ ಮಾಡಲು ದೇವರು ಹೇಗೆ ಅನುಮತಿಸಿದನೆಂದು ಆಶ್ಚರ್ಯವಾಗುತ್ತದೆ!!

ನಂತರ ನಾವು ಪ್ರವಾದಿಯಾದ ದಾನಿಯೇಲನು ಕಂಡ ಕ್ರಿಸ್ತವಿರೋಧಿಯ ವ್ಯವಸ್ಥೆಯ ದರ್ಶನವನ್ನು ಕುರಿತು ಕೆಳಗಿನ ವಾಕ್ಯದಲ್ಲಿ ಓದುತ್ತೇವೆ –


**ದಾನಿಯೇಲನು 7:28**

**“ದಾನಿಯೇಲನಾದ ನಾನು ನನ್ನ ಯೋಚನೆಗಳಿಂದ ಬಹು ಕಳವಳಗೊಂಡು ಮೊಗಗೆಟ್ಟೆನು.”**

ಹೌದು! ದಾನಿಯೇಲನು ಬಹು ಕಳವಳಗೊಂಡನು ಮತ್ತು ಆತನು ಈ ಕ್ರಿಸ್ತವಿರೋಧಿಯ ಇನ್ನೊಂದು ದರ್ಶನವನ್ನು ನೋಡಿದಾಗ ಕಾಯಿಲೆಬಿದ್ದನು ಎಂದು ನಾವು ಓದುತ್ತೇವೆ –

**ದಾನಿಯೇಲನು 8:27**

**“ಆಗ ದಾನಿಯೇಲನಾದ ನಾನು ಬೆಂಡಾಗಿ ಕೆಲವು ದಿವಸ ಕಾಯಿಲೆಬಿದ್ದೆನು.”**

 **ಇದನ್ನು ನೋಡಿದ್ದೀರಾ??!!**

**ಪ್ರಿಯ ಸಹೋದರ ಸಹೋದರಿಯರೇ,**
**ಇದು ಕ್ರಿಸ್ತ ವಿರೋಧಿಯ ಕೇವಲ ಅರ್ಧದಷ್ಟು ಇತಿಹಾಸವಾಗಿದೆ!**
**ಇನ್ನೂ ಉಳಿದ ಅರ್ಧಭಾಗವನ್ನು ...ಇನ್ನೂ ಹೇಳಬೇಕಾಗಿದೆ,**
**ಅವುಗಳನ್ನು ಕುರಿತು ... ಭಾಗ- 3 ರಲ್ಲಿ ಮುಂದಿನ ಅಧ್ಯಾಯದಲ್ಲಿ ನೋಡಲಿದ್ದೇವೆ.**

**ಕ್ರಿಸ್ತವಿರೋಧಿಯ ವ್ಯವಸ್ಥೆಯು ಇಂದಿಗೂ ಸಹ ನಮ್ಮ ಮಧ್ಯದಲ್ಲಿ ನಿಂತಿರುವದನ್ನು ನೋಡುತ್ತಿದ್ದೇವಲ್ಲವೆ?**

**ಈ ವ್ಯವಸ್ಥೆಯನ್ನು ನಾಶಮಾಡಲು ಹೇಗೆ ಸಾಧ್ಯ?**


**ಈ ವಿಷಯವನ್ನು ಕುರಿತು ಸತ್ಯವೇದವು ನಮಗೆ ಏನನ್ನು ಬೋಧಿಸುತ್ತದೆ?**

ನಮ್ಮ ಮುಂದಿನ ಮುಕ್ತಾಯದ ಕ್ರಿಸ್ತವಿರೋಧಿಯ ಅಭ್ಯಾಸದಲ್ಲಿ ಅದರ ಉತ್ತರವನ್ನು ನೋಡಲಿದ್ದೇವೆ ಮತ್ತು ಅನೇಕ ವಿಷಯಗಳನ್ನು ಪ್ರಕಟನೆ ಪುಸ್ತಕದಲ್ಲಿ ಈ ಕ್ರಿಸ್ತವಿರೋಧಿಯ ಇತಿಹಾಸ ಮತ್ತು ಬೆಳವಣಿಗೆ ಮತ್ತು ಅದರ ನಾಶನವನ್ನು ಕುರಿತು ಅಭ್ಯಾಸ ಮಾಡಲಿದ್ದೇವೆ.

**..... ಆಮೆನ್ ......**



For Private Circulation Only




NOT FOR SALE

For more Subjects contact: MESSENGERS OF CHRIST  E-mail: thekingdom1_6@yahoo.com